


ಸಂಪುಟ 1– ಸಂಚಿಕೆ 1 | ದ್ವೈಮಾಸಿಕ ಪತ್ರಿಕೆ | ದಿನಾಂಕ: ಮಾರ್ಚ್, 2010

## ಗೌರವ ಸಂಪಾದಕರಿಂದ

ರಾಜ್ಯದಲ್ಲಿ ಬಾಲಕಾರ್ಮಿಕತೆ ನಿರ್ಮೂಲನೆ ಹಾಗೂ ಪ್ರೌಢರಲ್ಲಿ ಹೆಚ್ಚುತ್ತಿರುವ ಆರ್ಥಿಕ ಶೋಷಣೆಯನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ರಾಜ್ಯ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರವು ಸ್ಥಾಪಿತಗೊಂಡಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಕಾರ್ಯದಲ್ಲಿ ಕೈಜೋಡಿಸಿ ಕೆಲಸ ಮಾಡುವುದು ಈ ಕೇಂದ್ರದ ಮುಖ್ಯ ಪ್ರಯತ್ನವಾಗಿರುತ್ತದೆ. ಮಕ್ಕಳ ಕಲ್ಯಾಣ ಹಾಗೂ ಬಾಲಕಾರ್ಮಿಕ ನಿರ್ಮೂಲನೆಗೆ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು, ವ್ಯಕ್ತಿಗಳು, ಸಾಮಾಜಿಕ ಸಂಘ ಸಂಸ್ಥೆಗಳಿಗೆ ನೆರವಾಗುವಂತಹ ಮಾಹಿತಿಯನ್ನು ನೀಡುವುದರ ಜೊತೆಗೆ, ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿರುವ ಜನರ ಗಮನವನ್ನು ಬಾಲಕಾರ್ಮಿಕತೆ ನಿರ್ಮೂಲನೆಯೆಡೆಗೆ ಸೆಳೆಯುವ ಪ್ರಯತ್ನ ಮಾಡುವುದು, ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ಒದಗಿಸುವುದು ಈ ಕೇಂದ್ರದ ಪ್ರಯತ್ನಗಳಾಗಿರುತ್ತವೆ. ಕೇಂದ್ರದ ಈ ಪ್ರಯತ್ನದಲ್ಲಿ ತಾವೆಲ್ಲರೂ ಕೈಜೋಡಿಸುತ್ತೀರೆಂದು ಆಶಯ ವ್ಯಕ್ತಪಡಿಸುತ್ತೇನೆ.



ಗೌರವ ಸಂಪಾದಕರು,
**ಎಂ.ಎಸ್. ರವಿಶಂಕರ್, ಐಎಎಸ್**
ಕಾರ್ಮಿಕ ಆಯುಕ್ತರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ,
ರಾಜ್ಯ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರ,
ಕರ್ನಾಟಕ ಸರ್ಕಾರ.

## ಒಳನೋಟ


| | |
|---|---|
| ಮಕ್ಕಳಿಗೆ ಹೊರೆಯಾದ 'ನೆರೆ | 2 |
| 5 ಪ್ರಶ್ನೆ-ಭಿನ್ನ ಉತ್ತರ | 4 |
| ಕೆಲವರ ಬಾಲ್ಯವೇಕೆ ಹೀಗೆ? | 5 |
| ಮಾಧ್ಯಮ ನೋಟ | 7 |
| ಬಾಲಕಾರ್ಮಿರಲ್ಲಿ 'ಪ್ರೇರಣ | 8 |
| ಸ್ವಯಂ ಸೇವಾ ಸಂಸ್ಥೆಗಳಿಗೆ ಲಭ್ಯವಿರುವ ಅನುದಾನ | 9 |
| ಪುಸ್ತಕ ವಿಮರ್ಶೆ | 10 |


## ಸಂಪಾದಕರ ಲೇಖನಿಯಿಂದ



ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರದಿಂದ ಹೊರ ತರಲಾಗುತ್ತಿರುವ **'ಬಾಲವಾಣಿ–ಬಾಲಕಾರ್ಮಿಕತೆ ಮೂಲೋತ್ಪಾಟನೆಗೊಂದು ಧ್ವನಿ'** ಎಂಬ ದ್ವೈಮಾಸಿಕ ವಿದ್ಯುನ್ಮಾನ ಪತ್ರಿಕೆ (ಇ–ಜರ್ನಲ್) ಅನ್ನು ಪ್ರಸ್ತುತಪಡಿಸಲು ಹರ್ಷಿಸುತ್ತೇವೆ. ಮಕ್ಕಳ ಕಲ್ಯಾಣ ಕಾರ್ಯಗಳಲ್ಲಿ ಆಗುತ್ತಿರುವ ಇತ್ತೀಚಿನ ಬೆಳವಣಿಗೆಗಳು ಹಾಗೂ ಬಾಲಕಾರ್ಮಿಕ ನಿರ್ಮೂಲನೆಯ ದನಿಯಾಗಿ **'ಬಾಲವಾಣಿ'** ವೇದಿಕೆಯಾಗಲಿದೆ. ರಾಜ್ಯದಲ್ಲಿ ಬಾಲಕಾರ್ಮಿಕತೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಇತರ ಸರ್ಕಾರಿ ಇಲಾಖೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಸಂಪರ್ಕಸೇತುವಾಗಿ ಹಾಗೂ ಸಂಯೋಜನಾ ಕೇಂದ್ರವಾಗಿ ಕಾರ್ಯ ನಿರ್ವಹಿಸುವ ಜೊತೆಗೆ ಬಾಲ ಕಾರ್ಮಿಕ ನಿರ್ಮೂಲನಾ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಮಕ್ಕಳ ಅಭಿವೃದ್ಧಿಯ ಬಗ್ಗೆ ಸರ್ಕಾರ ಹಾಗೂ ನಾಗರೀಕ ಸಮಾಜದ ನಡುವೆ ಸಂಪರ್ಕಸೇತುವಾಗಿ ಕಾರ್ಯ ನಿರ್ವಹಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ರಾಜ್ಯ ಬಾಲಕಾರ್ಮಿಕ ನಿರ್ಮೂಲನೆ ಕ್ರಿಯಾ ಯೋಜನೆಯ ಪುನರ್ ರಚನೆಯ ಜವಾಬ್ದಾರಿಯನ್ನೂ ಈ ಕೇಂದ್ರ ಹೊತ್ತಿದೆ. ಸಾಂಪ್ರದಾಯಿಕವಾಗಿರದೆ ವಿಭಿನ್ನ ರೀತಿಯಲ್ಲಿ ಇ–ಜರ್ನಲ್ ಅನ್ನು ಹೊರತರಲಾಗುತ್ತಿದೆ. ಈ ಸಂಪೂರ್ಣ ಪ್ರಯತ್ನವು ಹೆಚ್ಚು ಜನರನ್ನು ಬಾಲಕಾರ್ಮಿಕತೆ ನಿರ್ಮೂಲನೆಯೆಡೆಗೆ ಸೆಳೆಯುವುದು ಅಲ್ಲದೆ ವಿಶೇಷವಾಗಿ ಯುವ ಜನತೆಯನ್ನು ಈ ಕೆಲಸದಲ್ಲಿ ತೊಡಗಿಸುವುದು ಮುಖ್ಯ ಪ್ರಯತ್ನವಾಗಿದೆ. ಉತ್ತರ ಕರ್ನಾಟಕದಲ್ಲಿ ಮಕ್ಕಳ ಹಾಗೂ ಶಾಲೆಗಳ ಮೇಲೆ ನೆರೆ ಹಾವಳಿಯಿಂದ ಉಂಟಾದ ಪರಿಣಾಮಗಳ ಕುರಿತು ಹಾಗೂ ನೆರೆ ಪರಿಹಾರ ಕಾರ್ಯದಲ್ಲಿ ತೊಡಗಿಸಕೊಂಡಂತಹ ಹಲವು ಸರ್ಕಾರಿ, ಸ್ವಯಂ ಸೇವಾ ಸಂಸ್ಥೆಗಳ ಕಾರ್ಯವನ್ನು ಎತ್ತಿ ತೋರಿಸುವ ಪ್ರಯತ್ನವನ್ನು ಇ–ಜರ್ನಲ್‌ನ ಪ್ರಥಮ ಸಂಚಿಕೆಯಲ್ಲಿ ಮಾಡಲಾಗಿದೆ. ಒಟ್ಟಾರೆಯಾಗಿ ಈ ನಿಟ್ಟಿನಲ್ಲಿ ಹೋರಾಡುತ್ತಿರುವ ಎಲ್ಲ ಸಂಸ್ಥೆಗಳು ಹಾಗೂ ವ್ಯಕ್ತಿಗಳನ್ನು ಪ್ರೋತ್ಸಾಹಿಸುವಲ್ಲಿ **'ಬಾಲವಾಣಿ'** ಕಾರ್ಯ ನಿರ್ವಹಿಸಲಿದೆ. ನಮ್ಮ ಈ ಪ್ರಯತ್ನಕ್ಕೆ ನಿಮ್ಮ ಅಮೂಲ್ಯ ಅನಿಸಿಕೆಗಳು, ಸಲಹೆ ಸೂಚನೆಗಳನ್ನು ನೀಡುತ್ತೀರೆಂದು ಭಾವಿಸಿದ್ದೇನೆ. ನಿಮ್ಮ ಯೋಚನೆಗಳನ್ನು ಈ ಕೇಂದ್ರ ಗೌರವಿಸುತ್ತದೆ.



ಪ್ರಧಾನ ಸಂಪಾದಕರು,
**ಆರ್. ಬಸವರಾಜು**

# ಮಕ್ಕಳಿಗೆ ಹೊರೆಯಾದ 'ನೆರೆ'

ದೃಷ್ಟಿಕೋನ

ಇತ್ತೀಚೆಗೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ನೆರೆ ಹಾವಳಿಯಿಂದ ಉಂಟಾದ ಹಾನಿ, ಎಂದಿಗೂ ಮರೆಯಲಾಗದಂತಹ ನೋವನ್ನು ಸಾವಿರಾರು ಜನರಲ್ಲಿ ತಂದಿದೆ. ಅನಾವೃಷ್ಟಿಯಿಂದ ಪರಿತಪಿಸುತ್ತಿದ್ದ ಉತ್ತರ ಕರ್ನಾಟಕದಂತಹ ಭಾಗದಲ್ಲಿ ಈ ಅತಿವೃಷ್ಟಿಯಿಂದ ಆದ ನೆರೆ ನಿಜಕ್ಕೂ ಭಾರಿ ಅನಾಹುತವನ್ನೇ ಉಂಟು ಮಾಡಿತು. ಒಂದೆಡೆ ನೂರಾರು ಜನರು ಪ್ರಾಣ ತೆತ್ತರೆ, ಸಹಸ್ರಾರು ಜನರು ಮನೆ, ಆಸ್ತಿ ಮತ್ತು ಜಮೀನುಗಳನ್ನು ಕಳೆದುಕೊಂಡು ಇನ್ನೂ ಅತಂತ್ರ ಸ್ಥಿತಿ ಎದುರಿಸುತ್ತಿದ್ದಾರೆ. ಈ ಭಾಗದ ಜನರು ಎದುರಿಸುತ್ತಿರುವಂತಹ ಸಾವು ನೋವುಗಳನ್ನು ಮಾಧ್ಯಮಗಳು ಬಿಂಬಿಸಿದವು. ಆದರೆ, ನೆರೆಯಿಂದಾಗಿ ಮಕ್ಕಳಿಗೆ ಉಂಟಾದ ಪರಿಸ್ಥಿತಿ ಅಷ್ಟಾಗಿ ಗಮನಕ್ಕೆ ಬರಲಿಲ್ಲ. ಅಂದಾಜಿನ ಪ್ರಕಾರ 275,000 (source: headlinesindia.com, Oct. 9, 2009) ಜನರು ಮನೆಗಳನ್ನು ಕಳೆದುಕೊಳ್ಳಬೇಕಾಯಿತು. ಉತ್ತರ ಕನ್ನಡದ 200ಕ್ಕೂ ಹೆಚ್ಚು ಹಳ್ಳಿಗಳು ನೀರಿನಲ್ಲಿ ಕೊಚ್ಚಿ ಹೋದವು. ಬಿಜಾಪುರ, ಗುಲ್ಬರ್ಗಾ, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ಉತ್ತರ ಕನ್ನಡ (ಕಾರವಾರ) ಹಾಗೂ ರಾಯಚೂರು ಜಿಲ್ಲೆಗಳ ನೆರೆ ಹಾವಳಿಗೆ ಸಿಕ್ಕು ನಲುಗಿದವು. ಕರ್ನಾಟಕ ಹಾಗೂ ಆಂಧ್ರ ಪ್ರದೇಶ ಸೇರಿದಂತೆ ಅಂದಾಜು 75,000 (source: headlinesindia.com, Oct. 9, 2009) ಮಕ್ಕಳ ಶಿಕ್ಷಣ ಪರಿಸ್ಥಿತಿ ಶೋಚನೀಯವಾಯಿತು. ನೆರೆ ಹಾವಳಿಯಿಂದಾಗಿ ಸಾವಿರಾರು ಮಕ್ಕಳು ಶಾಲೆಗೆ ಹೋಗುವುದರಿಂದ ವಂಚಿತರಾದರು. ನೂರಾರು ಮಕ್ಕಳು ಇನ್ನೂ ಅನಾರೋಗ್ಯಪೀಡಿತರಾಗಿದ್ದಾರೆ. 4,500 (Front-line, Oct. 24, 09) ಶಾಲಾ ಕಟ್ಟಡಗಳು ಹಾನಿಗೊಳಗಾಯಿತು. ಎಲ್ಲವನ್ನೂ ಕಳೆದುಕೊಂಡ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲಾಗದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೆ, ಮಕ್ಕಳು ತಮ್ಮ ಅತ್ಯಮೂಲ್ಯ ಶಾಲಾ ಪಠ್ಯ ಪುಸ್ತಕಗಳನ್ನು ಕಳೆದುಕೊಂಡರು. ಒಟ್ಟಾರೆಯಾಗಿ, ಮಕ್ಕಳಿಗೆ ನೆರೆ ಹಾವಳಿಯಿಂದಾಗಿ ಉಂಟಾದ ಹಾನಿ ಅಪಾರ.

ಸರ್ವೋದಯ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶ್ರೀ ನಾಗರಾಜ ದೇಸಾಯಿ ಅವರ ಪ್ರಕಾರ ಕೊಪ್ಪಳ ಜಿಲ್ಲೆಯೊಂದರಲ್ಲಿಯೇ 16 ಶಾಲಾ ಕಟ್ಟಡಗಳು ಹಾನಿಗೊಳಗಾದವು. ಈ ಸಂಸ್ಥೆ ನೆರೆ ಸಂತ್ರಸ್ಥರಿಗೆ ಸಹಾಯ ಒದಗಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿತ್ತು. ಟೆಂಟ್ ಶಾಲೆಗಳನ್ನು ತೆರೆಯುವುದರ ಮೂಲಕ ಕೆಲವು ಮಕ್ಕಳು ಬಹು ಬೇಗ ತಮ್ಮ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಯಿತು. ಆದರೆ, ಮುದ್ದಾಳ, ಸಿರೂರು ಹಾಗೂ ಇನ್ನಿತರ ಹಳ್ಳಿಗಳಲ್ಲಿ ಪರಿಸ್ಥಿತಿ ಮೂರು ತಿಂಗಳಾದರೂ ಇನ್ನೂ ಗಂಭೀರವಾಗಿದೆ. ಸರ್ಕಾರದ ವತಿಯಿಂದ ಹಾನಿಗೊಳಗಾಗಿದ್ದಂತಹ ಹಲವು ಶಾಲೆಗಳ ದುರಸ್ತಿ ಕಾರ್ಯ ಇನ್ನೂ ಮುಂದುವರೆದಿದೆ. ನಾಗರಾಜ ದೇಸಾಯಿಯವರ ಪ್ರಕಾರ ಆ ಭಾಗದ ಗ್ರಾಮೀಣ ಪ್ರದೇಶದ ಜನರು ಸಹಾಯ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಂತಹ ರೀತಿ ಅನನ್ಯ. ಸರ್ಕಾರದ ನೆರವು ಕಾರ್ಯದಲ್ಲಿ, ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಷನ್, ಕೇರ್ ಇಂಡಿಯಾ ಹಾಗೂ ಹಲವು ಸ್ವಯಂ ಸೇವಾ ಸಂಸ್ಥೆಗಳು ಕೈ ಜೋಡಿಸಿ ಕೆಲಸ ಮಾಡುತ್ತಿವೆ.



ನೆರೆ ಹಾವಳಿಯಿಂದಾಗಿ ನಲುಗಿರುವ ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೂಕಿನಲ್ಲಿರುವ ಸರ್ಕಾರಿ ಶಾಲೆಯ ಮುಂಭಾಗದ ಒಂದು ನೋಟ.



ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ನೆರೆಯಿಂದ ಹಾನಿಗೊಳಗಾದ ಸರ್ಕಾರಿ ಶಾಲೆಯೊಂದರ ಒಳಾಂಗಣ ನೋಟ ಒಂದು ವಾರದ ನಂತರ ಹೀಗೆ ಕಂಡು ಬಂತು.

ಗದಗ ಜಿಲ್ಲೆಯಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿತ್ತು. ಹಲವು ಸಂಸ್ಥೆಗಳು ಹಾಗೂ ಸಮಾಜ ಸೇವಾ ಕಾರ್ಯಕರ್ತರು ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡುವ ಕಾರ್ಯದಲ್ಲಿ ಶ್ರಮ ಪಟ್ಟರು. ಜಿಲ್ಲೆಯಲ್ಲಿ ನೂರಾರು ಜನರು ತಮ್ಮ ಸಂಸಾರಗಳೊಡನೆ ಗುಳೆ ಹೋಗಿ ಇನ್ನೂ ಹಿಂದಿರುಗಿಲ್ಲ. ಹಲವರು ಇನ್ನೂ ಊರ ಹೊರಗಿನ ಜಮೀನಿನ ಟೆಂಟ್‌ಗಳಲ್ಲಿ, ದೇವಸ್ಥಾನ, ಛತ್ರಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಗುಳೆ ಹೋದ ಸಂಸಾರಗಳಲ್ಲಿ ಮಕ್ಕಳ ಶೈಕ್ಷಣಿಕ ಜೀವನ ಸಂಪೂರ್ಣ ಸ್ಥಗಿತಗೊಂಡಿದೆ.

ಹಲವು ಸಂಸ್ಥೆಗಳು ಸೇರಿ nerevunk.blog.com ಎಂಬ ಬ್ಲಾಗ್‌ನ ಮೂಲಕ, ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವಂತಹ ಸಂಸ್ಥೆಗಳಿಗೆ ಹಾಗೂ ಇನ್ನಿತರರಿಗೆ ವಿಶಿಷ್ಟ ರೀತಿಯಲ್ಲಿ ಸಹಾಯವನ್ನು ಒದಗಿಸುತ್ತಿದೆ. ಹಾನಿಗೊಳಗಾದಂತಹ ಪ್ರದೇಶಗಳ ವಿವರ, ಜನರ ಹೆಸರು, ವಿಳಾಸ, ಹಾನಿಗೊಳಗಾದ ಶಾಲೆಗಳ ಹಾಗೂ ಇನ್ನಿತರ ವಿವರಗಳನ್ನು, ಸ್ಥಳ ಪರಿಶೀಲನೆ ಮಾಡಿ ನಿಖರವಾದ ಮಾಹಿತಿಯನ್ನು ಈ ಬ್ಲಾಗ್‌ನ ಮುಖಾಂತರ ಒದಗಿಸುವ ಮೂಲಕ ಈ ಸಂಸ್ಥೆಗಳು ತಮ್ಮನ್ನು ತೊಡಗಿಸಿಕೊಂಡಿವೆ. ಈ ಬ್ಲಾಗ್‌ನ ಮಾಹಿತಿಯ ಪ್ರಕಾರ ಉತ್ತರ ಕರ್ನಾಟಕದ ನೆರೆ ಹಾವಳಿಗೆ ಒಳಗಾದ 8 ಜಿಲ್ಲೆಗಳಲ್ಲಿ, ಒಟ್ಟು 62 ಶಾಲಾ ಕಟ್ಟಗಳು ಹಾನಿಗೊಳಗಾಗಿವೆ. ಕೆಲವು ಕಟ್ಟಡಗಳನ್ನು ದುರಸ್ತಿಗೊಳಿಸಲಾಗಿದ್ದರೆ, ಕೆಲವು ಕಟ್ಟಡಗಳ ದುರಸ್ತಿ ಕಾರ್ಯ ಇನ್ನೂ ಸಂಪೂರ್ಣಗೊಂಡಿಲ್ಲ. ಈ ಜಿಲ್ಲೆಗಳಲ್ಲಿ ಅಂದಾಜು 75,000 ಶಾಲಾ ಮಕ್ಕಳ ಶಿಕ್ಷಣ ಕುಂಠಿತಗೊಂಡಿದೆ (nerevunk.blog.com ಆಧರಿತ ಮಾಹಿತಿ).

> “ಕರ್ನಾಟಕ ಹಾಗೂ ಆಂಧ್ರ ಪ್ರದೇಶ ಸೇರಿದಂತೆ ಅಂದಾಜು 75,000 ಮಕ್ಕಳ ಶಿಕ್ಷಣ ಪರಿಸ್ಥಿತಿ ಶೋಚನೀಯವಾಗಿದೆ. ನೆರೆ ಹಾವಳಿಯಿಂದಾಗಿ ಸಾವಿರಾರು ಮಕ್ಕಳು ಶಾಲೆಗೆ ಹೋಗುವುದರಿಂದ ವಂಚಿತರಾದರು. ನೂರಾರು ಮಕ್ಕಳು ಇನ್ನೂ ಅನಾರೋಗ್ಯಪೀಡಿತರಾಗಿದ್ದಾರೆ.

ಹಲವು ಸರ್ಕಾರೇತರ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಕರ್ನಾಟಕ ಸರ್ಕಾರ ಪರಿಹಾರ ಕಾರ್ಯಗಳನ್ನು ಯಶಸ್ವಿಯಾಗಿ ಕೈಗೊಂಡಿದೆ. ಸರ್ಕಾರ ಮುಖ್ಯವಾಗಿ ರಸ್ತೆ ದುರಸ್ತಿ ಹಾಗೂ ಕಟ್ಟಡಗಳ ದುರಸ್ತಿ ಕಾರ್ಯಗಳಲ್ಲಿ

ತೊಡಗಿಸಿಕೊಂಡರೆ, ಇನ್ನಿತರ ಸಂಸ್ಥೆಗಳ ಊಟ, ವಸತಿ ಹಾಗೂ ಇನ್ನಿತರ ಪರಿಹಾರ ಸಾಮಗ್ರಿಗಳನ್ನು ನಿಜವಾದ ಸಂತ್ರಸ್ಥರಿಗೆ ಒದಗಿಸಿಕೊಡುವ ಮೂಲಕ ತಮ್ಮ ಉದಾರತೆ ಮೆರೆದವು.

ಪ್ರಕೃತಿ ವಿಕೋಪಗಳನ್ನು ಮಾನವ ಶಕ್ತಿಯ ಮೂಲಕ ತಡೆಯಲಾಗದೆನ್ನುವುದು ಸತ್ಯ. ಆದರೆ, ಇಂತಹ ಸಂದರ್ಭಗಳಲ್ಲಿ ಸರ್ಕಾರವೂ ಸೇರಿದಂತೆ ಸಾಮಾನ್ಯ ಜನರಾಗಿ ನಾವೂ, ನೀವೆಲ್ಲರೂ ಪರಿಸ್ಥಿತಿಯನ್ನು ಇನ್ನಷ್ಟು ಉತ್ತಮವಾಗಿ ನಿಭಾಯಿಸುವ ಶಕ್ತಿ ಹೊಂದಬೇಕಾಗಿದೆ. ಇದಕ್ಕೂ ಮುಖ್ಯವಾಗಿ ಮಕ್ಕಳ ಶಿಕ್ಷಣ 'ನೆರೆ'ಯಲ್ಲಿ ಕೊಚ್ಚಿಹೋಗದಂತೆ ತಡೆಯಲು ಪ್ರಯತ್ನ ಮಾಡಬೇಕಾಗುತ್ತದೆ.

*"ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ನೆರವು ನೀಡುವಲ್ಲಿ ಸರ್ಕಾರ ಸಂಪೂರ್ಣವಾಗಿ ಸೋತಿದೆ ಎಂದು ಹೇಳುವುದು ಸರಿಯಲ್ಲ. ಗದಗ ಜಿಲ್ಲೆಯ ರೋಣ ತಾಲೂಕು ಆಡಳಿತ, ಪರಿಹಾರ ಕಾರ್ಯದಲ್ಲಿ ಕೈಜೋಡಿಸುವಂತೆ 'ದೇಶಪಾಂಡೆ ಫೌಂಡೇಷನ್' ಅನ್ನು ಕೇಳಿಕೊಂಡಿತು. ಇಂತಹ ಸಂದರ್ಭಗಳನ್ನು ನಿರ್ವಹಿಸುವುದು ಬಹಳ ಕಷ್ಟಕರ. ಆದರಲ್ಲೂ ಮುಂಜಾಗ್ರತಾ ಕ್ರಮಗಳಿಲ್ಲದೆ, ಯಾವುದೇ ಮುನ್ಸೂಚನೆಯಿಲ್ಲದೆ ಉಂಟಾದ ಸಂಕಷ್ಟದಿಂದ ಪರಿಸ್ಥಿತಿಯನ್ನು ಎದುರಿಸುವುದು ಇನ್ನಷ್ಟು ಕಷ್ಟಕರವಾಗಿತ್ತು. ಆದರೆ ಒಟ್ಟಾರೆ ಇಂತಹ ಪರಿಸ್ಥಿತಿ ನಮಗೆ ಒಳ್ಳೆಯ ಪಾಠ ಕಲಿಸಿದೆ. ಮುಂಬರುವ ದಿನಗಳಲ್ಲಿ ಜಾಗರೂಕರಾಗಿರಬೇಕೆಂಬುದನ್ನು ತೋರಿಸಿಕೊಟ್ಟಿದೆ, ಎನ್ನುತ್ತಾರೆ ಫೌಂಡೇಷನ್‌ನ ಅಮಿತ್ ಕುಮಾರ್.*

## ಪ್ರಕೃತಿ ವಿಕೋಪಗಳು ಉಂಟಾದ ಸಂದರ್ಭಗಳನ್ನು ನಿಭಾಯಿಸುವುದು ಹೇಗೆ?

ಮೇಲಿನ ಪ್ರಶ್ನೆಗೆ ಉತ್ತರಿಸುವುದು ಸುಲಭದ ಮಾತಲ್ಲ. ಈ ಪ್ರಶ್ನೆಗೆ ಸಂಬಂಧಿಸಿದಂತೆ ನೂರಾರು ಮಂದಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ನೆರೆ ಹಾವಳಿಯಿಂದಾಗಿ ಈ ಪ್ರಶ್ನೆ ಈ ಸಮಯದಲ್ಲಿ ಅತ್ಯಂತ ಪ್ರಸ್ತುತ. ಅನೇಕ ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮುಂದೆ ಬಂದಿದ್ದಾರೆ. ಹಲವು ಸಂಘ–ಸಂಸ್ಥೆಗಳು ಕೂಡ ತಮ್ಮದೇ ಆದ ಸಲಹೆ ಹಾಗೂ ಸೂಚನೆಗಳನ್ನು ಇಂಟರ್‌ನೆಟ್ ವೆಬ್‌ಸೈಟ್ ಹಾಗೂ ಬ್ಲಾಗ್‌ಗಳ ಮೂಲಕ ಸೂಚಿಸಿವೆ. ಈ ರೀತಿ ಬಂದಿರುವ ಕೆಲವು ಸಲಹೆಗಳು ಅತ್ಯಂತ ಉಪಯುಕ್ತ. ನೈಸರ್ಗಿಕ ಆಪತ್ತುಗಳಿಂದಾಗಿ ಶಾಲೆ ಮತ್ತು ಮಕ್ಕಳ ಮೇಲಾಗುವ ಪರಿಣಾಮಗಳನ್ನು ಹೇಗೆ ಎದುರಿಸಬೇಕು ಎಂಬ ವಿಚಾರವಾಗಿ 'ಸಲ್ಯೂಷನ್ ಎಕ್ಸ್‌ಚೇಂಜ್ ಕರ್ನಾಟಕ ಸಮುದಾಯ'ದಲ್ಲಿ ವ್ಯಕ್ತವಾದ ಕೆಲವು ಅಭಿಪ್ರಾಯಗಳನ್ನು ಇಲ್ಲಿ ವಿವರಿಸಲಾಗಿದೆ.

**ರಾಜ್ಯಾಡಳಿತ ಮತ್ತು ಜಿಲ್ಲಾಡಳಿತವು ತೆಗೆದುಕೊಳ್ಳಬೇಕಾದ ತತ್‌ಕ್ಷಣದ ಆತ್ಮವಿಶ್ವಾಸವನ್ನು ವೃದ್ಧಿಪಡಿಸುವ ಕ್ರಮಗಳು:**

ಸರ್ಕಾರಿ ಮತ್ತು ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಉನ್ನತ ವ್ಯಾಸಂಗದಲ್ಲಿ ನಿರತರಾದ ತೊಂದರೆಗೊಳಗಾದ ಕುಟುಂಬಗಳ ವಿದ್ಯಾರ್ಥಿಗಳ ಟ್ಯೂಷನ್ ಫೀಸನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು ಅಥವಾ ಯಾವುದೇ ಫೀಸನ್ನು ಎರಡು ವರ್ಷಗಳವರೆಗೆ ಪಡೆದುಕೊಳ್ಳಬಾರದು. ಬಹಳ ಮಕ್ಕಳು ಇಂಜಿನಿಯರಿಂಗ್ ವೈದ್ಯಕೀಯ ಮತ್ತು ಉನ್ನತ ಶಿಕ್ಷಣವನ್ನು ತಮ್ಮ ಜಿಲ್ಲೆಗಳಲ್ಲಿ ಮತ್ತು ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಪಡೆಯುತ್ತಿದ್ದಾರೆ. ತೊಂದರೆಗೊಳಗಾದ ಕುಟುಂಬದ ಮಕ್ಕಳಿಗೆ ಶಿಕ್ಷಣಕ್ಕೆ ಬೆಂಬಲ ನೀಡುವುದು ವಿಕೋಪದ ಸಂದರ್ಭದಲ್ಲಿ ಸ್ಪಂದನೆ ನೀಡಿದಂತಾಗುತ್ತದೆ.

**ಕಟ್ಟಡಗಳನ್ನು ಪುನರ್ವಸತಿ ಶಿಬಿರಗಳಿಗೆ ಬಳಸಬೇಕಾದರೆ ಮಾಡಬೇಕಾರುವುದು ಏನು?**

ಬಹಳ ಗ್ರಾಮಗಳಲ್ಲಿ ಸಾರ್ವಜನಿಕ ಕಟ್ಟಡಗಳು ಕಂಡು ಬರುವುದಿಲ್ಲ. ಸಾರ್ವಜನಿಕ ಕಟ್ಟಡಗಳು ಮುಖ್ಯವಾಗಿ ಶಾಲೆಗಳು, ಪಂಚಾಯತ್ ಕಟ್ಟಡಗಳು, ಅಥವಾ ಆರೋಗ್ಯ ಇಲಾಖೆಗಳು. ಕೆಲವು ಪ್ರದೇಶಗಳಲ್ಲಿ ಮಸತಿಗೃಹಗಳಿವೆ. ಶಿಬಿರಗಳಿಗೆ ಉಪಯೋಗಿಸದೇ ಇರುವ ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳನ್ನು ಗುರುತಿಸುವುದು ಅವಶ್ಯಕ. ಮದುವೆ ಛತ್ರ, ಧಾರ್ಮಿಕ ಸ್ಥಳಗಳನ್ನು ಕೂಡಾ ಪುನರ್ವಸತಿ ಶಿಬಿರಗಳಿಗೆ ಬಳಸಬಹುದು. ಉದಾಹರಣೆಗೆ, ಸುನಾಮಿ ಸಮಾಧಾನಕರ ಶಿಬಿರಕ್ಕೆ ಚರ್ಚ್‌ಗಳನ್ನು, ದೇವಸ್ಥಾನಗಳನ್ನು ಮತ್ತು ಮಸೀದಿಗಳನ್ನು ಬಳಸಿದ್ದರು.

**ಸಲ್ಯೂಷನ್ ಎಕ್ಸ್‌ಚೇಂಜ್,**
**ಕರ್ನಾಟಕ ಕಮ್ಯೂನಿಟಿ**

ಪ್ರತಿಯೊಂದು ವಿಪತ್ತು ಮನುಷ್ಯನಿಂದ ಸಂಭವಿಸಿದ್ದಾಗಿರಬಹುದು ನೈಸರ್ಗಿಕವಾಗಿರಬಹುದು. ಅಂತಹ ಸಂದರ್ಭಗಳಲ್ಲಿ ನೈಜತೆಯನ್ನು ಹೊತ್ತ ಕರುಣೆಯ ಸನ್ನಿವೇಶವನ್ನು ಸೃಷ್ಟಿಸುತ್ತದೆ. ಆದರೆ ಸರ್ಕಾರದ ಮತ್ತು ಇತರರ ಯೋಜನಾರಹಿತ, ಅಸಂಘಟಿತ ಯೋಜನೆಗಳು, ಪ್ರತಿಕ್ರಿಯೆಗಳು ಪರಿಸ್ಥಿತಿಯನ್ನು ಇನ್ನಷ್ಟು ಜಟಿಲವಾಗಿಸುತ್ತದೆ. ಸಾರ್ವಜನಿಕರ ಕೊಡುಗೆಗಳು ತೊಂದರೆಗೊಳಗಾದ ಜನತೆಯನ್ನು ತಲುಪುವಲ್ಲಿ ವಿಫಲವಾಗುತ್ತದೆ.

**ಪುನರ್ವಸತಿ ಯೋಜನೆ**

ಪುನರ್ವಸತಿ ಶಿಬಿರಗಳ ಯೋಜನೆಗಳನ್ನು ತೊಂದರೆಗೊಳಗಾದ ಕುಟುಂಬಗಳ/ ಸಮುದಾಯದ ಮತ್ತು ಮಕ್ಕಳ ಅಭಿಪ್ರಾಯವನ್ನು ಆಧರಿಸಿ ಮಾಡಬೇಕಾಗುತ್ತದೆ (ಉತ್ತರ ಕರ್ನಾಟಕದ ಗ್ರಾಮವೊಂದಕ್ಕೆ ಇತ್ತೀಚೆಗೆ ಭೇಟಿಯಾದ ನಮ್ಮ ಸಹೋದ್ಯೋಗಿಗಳ ಅಭಿಪ್ರಾಯದ ಪ್ರಕಾರ ಅಸ್ತಿತ್ವದಲ್ಲಿರುವ ಗಂಜಿ ಕೇಂದ್ರವನ್ನು ಮುಚ್ಚಿ ಅದರ ಬದಲು ಅಕ್ಕಿಯನ್ನು ಹಂಚುತ್ತಿರುವ ಸನ್ನಿವೇಶವನ್ನು ಅವರು ನೋಡಿದ್ದಾರೆ. ಅಡುಗೆ ಇಂಧನ, ಪಾತ್ರೆಗಳು ಏನೂ ಇಲ್ಲದೇ ಇರುವಾಗ ಕೇವಲ ಅಕ್ಕಿಯನ್ನು ಪಡೆದುಕೊಂಡು ಮಾಡುವುದಾದರೂ ಏನು? ಇದು ಯೋಚನಾರಹಿತ ಕ್ರಮವಾಗಿದೆ.

**ಕಡಿಮೆ ಅವಧಿಯಲ್ಲಿ ಕೈಗೊಳ್ಳಬೇಕಾದ ತಕ್ಷಣದ ಕ್ರಮಗಳು**

- ತುರ್ತು ಕಾಳಜಿ, ಇದು ಮೂಲಭೂತ ಅವಶ್ಯಕತೆಗಳಾದ ಸ್ವಚ್ಛತೆ, ನೈರ್ಮಲ್ಯ ಮತ್ತು ಸಾಂಕ್ರಾಮಿಕ ರೋಗಗಳ ನಿಯಂತ್ರಣವನ್ನು ಒಳಗೊಂಡಿರಬೇಕು.
- ಅತಿ ಹೆಚ್ಚು ತೊಂದರೆಗೊಳಗಾಗುವ ಗುಂಪು (ಮಹಿಳೆಯರು, ಮಕ್ಕಳು, ವಿಶೇಷವಾಗಿ ಹೆಣ್ಣು ಮಕ್ಕಳು, ವಯಸ್ಸಾದವರು, ರೋಗಿಷ್ಟರು ಮತ್ತು ಅಂಗವಿಕಲರು)ಗಳಿಗೆ ಆದ್ಯತೆ ನೀಡುವುದು.
- ನಾಪತ್ತೆಯಾದ ಮಕ್ಕಳು ಮತ್ತು ಇತರ ವ್ಯಕ್ತಿಗಳ ಪತ್ತೆಗೆ ಪೊಲೀಸರೊಂದಿಗೆ ಸಂಯೋಜನೆ.
- ಅನಾಥ ಮಕ್ಕಳಿಗೆ ಬೆಂಬಲ ಮತ್ತು ಕಾಳಜಿ– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು (ಡಿಡ್ಬ್ಲ್ಯೂಸಿಡಿ) ಪರ್ಯಾಯ ಕಾಳಜಿಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.
- ಪಬ್ಲಿಕ್ ಪರೀಕ್ಷೆಗಳನ್ನು ಬರೆಯುತ್ತಿರುವ ಮಕ್ಕಳಿಗೆ ಶೈಕ್ಷಣಿಕ ಬೆಂಬಲಕ್ಕೆ ವಿಶೇಷವಾದ ಉತ್ತೇಜನ ಮತ್ತು ಕಾಳಜಿ. (ಇಲಾಖೆಯು ಇತ್ತೀಚೆಗಷ್ಟೇ ಕರ್ನಾಟಕ ರಾಜ್ಯ ನಿಯಮದ ಜುವೈನಲ್ ಜಸ್ಟೀಸ್ ಕಾಯ್ದೆ (ನಿಯಮ 44)ರಲ್ಲಿ ವಿಪತ್ತಿನಿಂದ ತೊಂದರೆಗೊಳಗಾದ ಮಕ್ಕಳ ಬಗ್ಗೆ ವಿಶೇಷವಾದ ಕಾಳಜಿಯನ್ನು ತೆಗೆದುಕೊಳ್ಳಬೇಕೆಂದು ತಿಳಿಸುತ್ತದೆ).

**ಸುಚಿತ್ರಾ ರಾವ್,**
ರಾಜ್ಯ ಮಕ್ಕಳ ರಕ್ಷಣೆಯ ವಿಭಾಗ, ಮಹಿಳಾ ಮತ್ತು ಮಕ್ಕಳ ಇಲಾಖೆ, ಬೆಂಗಳೂರು.

# ೫ ಪ್ರಶ್ನೆ-ಭಿನ್ನ ಉತ್ತರ

**ರಮೇಶ್ ಬಿ. ಝಳಕಿ, ಐ.ಎ.ಎಸ್.**
ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ.



**1. ಭಾರತದಲ್ಲಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸವಾಲಾಗಿಯೇ ಉಳಿದಿರುವುದು ಏಕೆ?**

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಂಬಂಧಪಟ್ಟಂತಹ ಸರ್ಕಾರದ ಪ್ರಯತ್ನಗಳನ್ನು ವಿವರಿಸುವುದಕ್ಕಿಂತ ಮಿಗಿಲಾಗಿ, ಬಡತನ, ಸಾಮಾಜಿಕ ತೊಡಕುಗಳು, ಶಿಕ್ಷಣದ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ ಜನರಲ್ಲಿ ಇನ್ನೂ ಅರಿವು ಬಾರದಿರುವ ಕೊರತೆ, ಇವೇ ಮುಂತಾದವು ಪ್ರಮುಖ ಕಾರಣಗಳು ಎನ್ನಬಹುದು.

**2. ಬಾಲ ಕಾರ್ಮಿಕ ಪದ್ಧತಿ ಇನ್ನೂ ಮುಂದುವರಿಯುತ್ತಿರುವುದಕ್ಕೆ ಯಾರು ಕಾರಣ?**

ಸ್ವಾಭಾವಿಕವಾಗಿ ಪೋಷಕರು, ಆದರೆ ಸಮಾಜದ ಸಂಪೂರ್ಣ ವ್ಯವಸ್ಥೆ ಕೂಡ ಇದಕ್ಕೆ ಹೊಣೆ ಎನ್ನಬಹುದು. ಭಾರತದಂತಹ ರಾಷ್ಟ್ರದಲ್ಲಿ ಮುಂದುವರೆಯುತ್ತಿರುವ ಕೆಲವು ಸಾಮಾಜಿಕ ಪದ್ಧತಿಗಳು ಕೂಡ ಇದಕ್ಕೆ ಕಾರಣವಾಗುತ್ತವೆ.

**3. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರ್ಕಾರ ಯಾವ ರೀತಿ ಪ್ರಯತ್ನಿಸಬೇಕು?**

ನನಗೆ ತಿಳಿದಿರುವಂತೆ ಶಿಕ್ಷಣದ ಮೂಲಕ ಈ ಅನಿಷ್ಟ ಪದ್ಧತಿಯನ್ನು ಬಹುಪಾಲು ನಿಯಂತ್ರಿಸಬಹುದು. ಬಡತನ ನಿರ್ಮೂಲನೆಗೆ ಇನ್ನೂ ಪ್ರಯತ್ನಗಳು ಕೂಡ ಆಗಬೇಕು. ಇದರ ಜತೆಗೆ ಜನರಲ್ಲಿ ಕುಟುಂಬ ನಿಯಂತ್ರಣೆಯ ಬಗ್ಗೆ ಸಹ ಅರಿವು ಮೂಡಿಸುವುದು ತುಂಬಾ ಅನಿವಾರ್ಯ. ಏಕೆಂದರೆ ದೊಡ್ಡ ಸಂಸಾರಗಳನ್ನು ನಾವು ಹಲವಾರು ಕಡೆ ಇನ್ನೂ ಕಾಣಬಹುದು.

**4. ಬಾಲ ಕಾರ್ಮಿಕ ನಿರ್ಮೂಲನೆಯ ಜವಾಬ್ದಾರಿ ಕೇವಲ ಸರ್ಕಾರದ್ದೇ? ಯಾರೆಲ್ಲ ಇದರಲ್ಲಿ ಕೈ ಜೋಡಿಸಬೇಕು?**

ಈ ನಿಟ್ಟಿನಲ್ಲಿ ಸರ್ಕಾರದ ಪಾತ್ರ ದೊಡ್ಡದಾಗಿದ್ದರೂ, ಪೋಷಕರು, ಉದ್ಯೋಗದಾತರು ಸೇರಿದಂತೆ ಎಲ್ಲರೂ ಸರ್ಕಾರದ ಜೊತೆ ಕೈ ಜೋಡಿಸಬೇಕು. ಇಂತಹ ಸಮಸ್ಯೆಗಳನ್ನು ಎಲ್ಲರ ಸಹಾಯ ಇಲ್ಲದಂತೆ ಹೋಗಾಲಾಡಿಸುವುದು ಅಸಾಧ್ಯ. ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳು ಜನರಲ್ಲಿ ಬಾಲ ಕಾರ್ಮಿಕ ನಿರ್ಮೂಲನೆಯ ಬಗ್ಗೆ ಅರಿವು ಮೂಡಿಸುವಂತಹ ಕೆಲಸಗಳನ್ನು ಮಾಡುವಲ್ಲಿ ಹೆಚ್ಚಿನ ಕೆಲಸ ಮಾಡಬೇಕಾಗಿದೆ.

**5. ನೀವು ತಿಳಿದಿರುವಂತೆ ಬಾಲ ಕಾರ್ಮಿಕತೆ ಎಂದರೆ ಏನು?**

ಇದೊಂದು ಸಾಮಾಜಿಕ ಅನಿಷ್ಟ ಎಂದರೆ ತಪ್ಪಾಗಲಾರದು.

---

**ಡಾ. ಎನ್.ಎಸ್. ಅಶೋಕ್ ಕುಮಾರ್**
ಪ್ರೊಫೆಸರ್ ಹಾಗೂ ಅಧ್ಯಕ್ಷರು, ಎಲೆಕ್ಟ್ರಾನಿಕ್ ಮೀಡಿಯಾ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.



**1. ಭಾರತದಲ್ಲಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸವಾಲಾಗಿಯೇ ಉಳಿದಿರುವುದು ಏಕೆ?**

ಬಾಲ ಕಾರ್ಮಿಕತೆಯ ನಿಜವಾದ ಅರ್ಥ ಇನ್ನೂ ಜನರಲ್ಲಿ ಮೂಡದಿರುವುದೇ ಸಮಸ್ಯೆಗೆ ಕಾರಣ ಎನ್ನಬಹುದು. ಒಂದೆಡೆ ಶಿಕ್ಷಿತರು ತಿಳಿದಿದ್ದೂ ಇದನ್ನು ನಿರ್ಲಕ್ಷ್ಯಸುತ್ತಿದ್ದರೆ, ಇನ್ನೊಂದೆಡೆ ಗ್ರಾಮಿಣ ಪ್ರದೇಶದ ಜನರಲ್ಲಿ ಬಾಲ ಕಾರ್ಮಿಕತೆಯ ಅನಿಷ್ಟಗಳ ಬಗ್ಗೆ ಇನ್ನೂ ಸಂಪೂರ್ಣವಾಗಿ ಅರಿವು ಮೂಡಿಸುವ ಪ್ರಯತ್ನವಾಗದಿರುವುದು ಒಂದು ಮುಖ್ಯ ಕಾರಣ. ಸರ್ಕಾರದ ಕೆಲವು ಕಾರ್ಯಕ್ರಮಗಳು ನಿಜವಾಗಿಯೂ ಅಗತ್ಯವಿರುವವರಿಗೆ ತಲುಪುತ್ತಿಲ್ಲ ಹಾಗೂ ಹಲವಾರು ಉಪಯುಕ್ತ ಕಾರ್ಯಕ್ರಮಗಳು ಸರಿಯಾಗಿ ಬಳಸಲಾಗುತ್ತಿಲ್ಲ ಎಂದು ನನಗನಿಸುತ್ತದೆ.

**2. ಬಾಲ ಕಾರ್ಮಿಕ ಪದ್ಧತಿ ಇನ್ನೂ ಮುಂದುವರಿಯುತ್ತಿರುವುದಕ್ಕೆ ಯಾರು ಕಾರಣ?**

ಶಿಕ್ಷಿತರು ಎನಿಸಿಕೊಳ್ಳುತ್ತಿರುವ ನಾವೆಲ್ಲರೂ ಇದಕ್ಕೆ ಹೊಣೆ. ಒಂದೆಡೆ ಇದೊಂದು ಅನಿಷ್ಟ ಪದ್ಧತಿ ಎಂದು ಒಪ್ಪಿಕೊಳ್ಳುವ ನಾವು, ಈ ಪದ್ಧತಿಯನ್ನು ವಿರೋಧಿಸುವ ಅಥವಾ ತೊಡೆದುಹಾಕುವ ಪ್ರಯತ್ನವನ್ನು ಎಂದೂ ಮಾಡುವುದಿಲ್ಲ. ಜೊತೆಗೆ ಮಾಲೀಕರು, ಪೋಷಕರು ಹಾಗೂ ಎಲ್ಲರೂ ಇದಕ್ಕೆ ಹೊಣೆ.

**3. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರ್ಕಾರ ಯಾವ ರೀತಿ ಪ್ರಯತ್ನಿಸಬೇಕು?**

ಬಾಲ ಕಾರ್ಮಿಕತೆ ಬಗ್ಗೆ ಅರಿವು ಮೂಡಿಸುವ ಪ್ರಯತ್ನಗಳು ಶಾಲೆಯಿಂದಲೇ ಆರಂಭವಾಗಬೇಕು. ಇದನ್ನು ಪಠ್ಯದಲ್ಲಿ ಸೇರಿಸುವುದರ ಮೂಲಕ ಹೆಚ್ಚಿನ ಅರಿವು ಮೂಡಿಸಬಹುದು. ಗೆಳೆಯರಲ್ಲಿ ಅರಿವು ಮೂಡಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು. ಪ್ರೋತ್ಸಾಹ ಅಂಕಗಳನ್ನು ಕೊಡುವುದರ ಮೂಲಕ ಮಕ್ಕಳನ್ನು ಹಾಗೂ ಇಂತಿಷ್ಟು ಕುಟುಂಬಗಳಲ್ಲಿ ಅಥವಾ ಮಕ್ಕಳಲ್ಲಿ ಬಾಲ ಕಾರ್ಮಿಕತೆ ನಿರ್ಮೂಲನೆ ಬಗ್ಗೆ ಅರಿವು ಮೂಡಿಸಿದರೆ ಸಣ್ಣ ಪ್ರಮಾಣದ ಪ್ರೋತ್ಸಾಹ ಧನ ಕೊಡುವುದರ ಮೂಲಕ ಶಿಕ್ಷಕರನ್ನು ಉತ್ತೇಜಿಸಬೇಕು. ಈ ಪ್ರಯತ್ನ ಗ್ರಾಮೀಣ ಪ್ರದೇಶಗಳಿಂದ ಆರಂಭವಾಗಬೇಕು.

**4. ಬಾಲ ಕಾರ್ಮಿಕ ನಿರ್ಮೂಲನೆಯ ಜವಾಬ್ದಾರಿ ಕೇವಲ ಸರ್ಕಾರದ್ದೇ? ಯಾರೆಲ್ಲ ಇದರಲ್ಲಿ ಕೈ ಜೋಡಿಸಬೇಕು?**

ಸಾಮಾಜಿಕ ಕಳಕಳಿಗೆ ದುಡಿಯುತ್ತಿರುವಂತಹ ಹಲವಾರು ಎನ್‌ಜಿಓಗಳು ಹಾಗೂ ಇತರೆ ಸಂಸ್ಥೆಗಳು ಸೇರಿದಂತೆ ಇದು ಎಲ್ಲರ ಜವಾಬ್ದಾರಿ. ಬಾಲ ಕಾರ್ಮಿಕ ಪದ್ಧತೆ ನಿರ್ಮೂಲನೆಗೆ ಸಂಬಂಧಿಸಿದಂತೆ ಸರ್ಕಾರದ ನೀತಿಗಳು ಬಲಹೀನ ಎಂದು ಹಲವು ಬಾರಿ ನನಗನಿಸುತ್ತದೆ. ಉದಾಹರಣೆಗೆ ಅಮೇರಿಕದಂತಹ ರಾಷ್ಟ್ರಗಳಲ್ಲಿ ಪೋಷಕರು ಪುಸ್ತಕ ಕೊಡಿಸಲಾಗಲಿಲ್ಲ ಎಂಬ ಕಾರಣಕ್ಕೆ ಒಬ್ಬ ಹುಡುಗ ತನ್ನ ಹೋಂವರ್ಕ್ ಅನ್ನು ಮಾಡದೇ ಇದ್ದರೆ ಅದೊಂದು ಶಿಕ್ಷಾರ್ಹ ಅಪರಾಧವಾಗುತ್ತದೆ. ಅಂತಹ ನೀತಿಗಳು ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯನ್ನು ನಿಯಂತ್ರಿಸುವಲ್ಲಿ ಬಹಳ ಉಪಯುಕ್ತವಾಗಬಹುದು.

**5. ನೀವು ತಿಳಿದಿರುವಂತೆ ಬಾಲ ಕಾರ್ಮಿಕತೆ ಎಂದರೆ ಏನು?**

ಇದು ಮದ್ಯಪಾನ ಸಮಸ್ಯೆಗಿಂತ ತೀವ್ರವಾದದ್ದು ಎನ್ನಬಹುದಾದಂತಹ ಸಮಸ್ಯೆ.

# ಕೆಲವರ ಬಾಲ್ಯವೇಕೆ ಹೀಗೆ ?

**ರಾಜ್ಯದಲ್ಲಿ ಬಾಲ ಕಾರ್ಮಿಕತೆ ನಿರ್ಮೂಲನೆ ಹಾಗೂ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಸಂಘ ಸಂಸ್ಥೆಗಳು ಹಲವಾರು ಇವೆ. ಹಲವು ಸಂಸ್ಥೆಗಳು ಈ ನಿಟ್ಟಿನಲ್ಲಿ ಗಣನೀಯ ಸಾಧನೆಯನ್ನೂ ಮಾಡಿವೆ ಹಾಗೂ ಆ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿವೆ. ಆದರೂ ಬಾಲ ಕಾರ್ಮಿಕತೆಯ ಸಂಪೂರ್ಣ ನಿರ್ಮೂಲನೆ ಇಂದಿಗೂ ಸಾಧ್ಯವಾಗಿಲ್ಲ. ಮಕ್ಕಳ ಪುನರ್ವಸತಿ ಕಾರ್ಯಗಳಲ್ಲಿ ನಿರತವಾಗಿರುವ ಇಂತಹ ಸಂಸ್ಥೆಗಳು ಹಲವಾರು ತೊಂದರೆಗಳ ನಡುವೆ ಕಾರ್ಯ ನಿರ್ವಹಿಸುತ್ತವೆ, ಶಾಲೆ ಬಿಟ್ಟ ಮಕ್ಕಳ ಕಷ್ಟ, ನೋವುಗಳನ್ನು ಅರಿತು ಕೆಲಸ ಮಾಡುತ್ತವೆ. ಇಂತಹ ಮಕ್ಕಳ ಪರಿಸ್ಥಿತಿ ಬಹುಬಾರಿ ದಯನೀಯವಾಗಿರುತ್ತದೆ. ಬಾಲ ಕಾರ್ಮಿಕ ಸಂಪನ್ಮೂಲ ಕೇಂದ್ರದಿಂದ ಹೊರ ತರುತ್ತಿರುವ ವಿದ್ಯುನ್ಮಾನ ಪತ್ರಿಕೆ (ಇ-ಜರ್ನಲ್) ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವಂತಹ ಇಂತಹ ಸಂಸ್ಥೆಗಳ ಕಾರ್ಯಗಳು ಹಾಗೂ ಯಶೋಗಾಥೆಯನ್ನು ತಮ್ಮ ಮುಂದಿಡುವ ಪ್ರಯತ್ನ ಮಾಡಲಿದೆ. ಇ-ಜರ್ನಲ್‌ನ ಮೊದಲ ಸಂಚಿಕೆಯಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ, ಅಂತಾರಾಷ್ಟ್ರೀಯ ಬಾಲ ಕಾರ್ಮಿಕ ನಿರ್ಮೂಲನಾ ಕಾರ್ಯಕ್ರಮ ಯೋಜನೆಯಡಿ ಕಾರ್ಯಗತಗೊಳಿಸಿರುವ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸಂಘ (ಎನ್‌ಸಿಎಲ್‌ಪಿಎಸ್) ದಿಂದ ಚಾಮರಾಜನಗರ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕೈಗೊಂಡ ಕೆಲವು ಕೇಸ್ ಸ್ಟಡಿಸ್ ಅನ್ನು ತಮ್ಮ ಮುಂದಿಡುತ್ತಿದ್ದೇವೆ.**

ಬೀದರ್ ಜಿಲ್ಲೆಯ ಭಾಲ್ಕಿಯ ಬಳಿಯಿರುವ ಒಂದು ಹಳ್ಳಿಯಲ್ಲಿ ಸಾಜನ್ ಎಂಬ 14 ವರ್ಷ ವಯಸ್ಸಿನ ಬಾಲಕಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಳು. ಈಕೆ ಮುಸ್ಲಿಂ ಜನಾಂಗಕ್ಕೆ ಸೇರಿದವಳಾಗಿದ್ದು, ಈಕೆಯ ಕುಟುಂಬ ಕಡು ಬಡತನದಲ್ಲಿ ಬದುಕುತ್ತಿತ್ತು. ಈಕೆಯ ತಂದೆ ರಸ್ತೆ ಬದಿ ತರಕಾರಿ ವ್ಯಾಪಾರಿ-ಯಾಗಿದ್ದರು. ತರಕಾರಿ ಸಂಗ್ರಹಿಸುವುದು, ಕಳೆ ಕೀಳುವುದು, ಮನೆ ಕೆಲಸ ಮಾಡುವುದು ಈಕೆಯ ನಿತ್ಯ ಕಾರ್ಯ-ಗಳಾಗಿದ್ದವು. ಈಕೆ ಎಂದೂ ಶಾಲೆಗೆ ಹೋದವಳಲ್ಲ



**ಸಾಜನ್ (ಭಾಲ್ಕಿಯಲ್ಲಿ ಶಾಲೆಗೆ ಸೇರಿದ ನಂತರ)**

> ***'ನಾನು ಶಾಲೆಗೆ ಸೇರಿರದಿದ್ದರೆ ಏನನ್ನು ಕಳೆದುಕೊಳ್ಳುತ್ತಿದ್ದೆ ಎಂದು ಈಗ ತಿಳಿಯುತ್ತಿದೆ'***

ಬಾಲಕಿ ಎಂಬ ಕಾರಣಕ್ಕಾಗಿ, ಈಕೆಯ ಮಾಲೀಕ ಕಡಿಮೆ ಸಂಬಳ ನೀಡಿ, ಈಕೆಯಿಂದ ಹೆಚ್ಚಿನ ಕೆಲಸ ಮಾಡಿಸುವುದರ ಮೂಲಕ ಶೋಷಿಸುತ್ತಿದ್ದ. ಸಾಜನ್‌ಳ ವಯಸ್ಸಿಗೆ ಇದು ಮಿತಿ ಮೀರಿದ ಕೆಲಸವಾಗಿರುತ್ತಿತ್ತು. ಬೆಳಗಿನ ವೇಳೆ ದಿನವೂ ಸುಡುಬಿಸಿಲಿನಲ್ಲಿ ಕೆಲಸ ಮಾಡುತ್ತಿದ್ದಳು, ಮತ್ತೆ ಸಂಜೆಯ ಹೊತ್ತು ತನ್ನ ತಂದೆಯ ಜೊತೆ ತರಕಾರಿ ಮಾರಲು ಸಹಾಯ ಮಾಡುತ್ತಿದ್ದಳು.

ಬಹುತೇಕ ತನ್ನಂತಹ ಶಿಕ್ಷಣ ವಂಚಿತ ಎಲ್ಲ ಮಕ್ಕಳ ಹಾಗೆ ಸಾಜನ್ ಕೂಡ, ಶಾಲೆ ಮುಗಿಸಿಕೊಂಡು ಮನೆಗೆ ಹೋಗುವ ಮಕ್ಕಳನ್ನು ತನ್ನ ಬೆರಗು ಕಣ್ಣುಗಳಿಂದ ನೋಡಿ, 'ನನಗೇಕೆ ಈ ರೀತಿ ಬದುಕಿಲ್ಲ, ನನ್ನನೇಕೆ ಶಾಲೆಗೆ ಕಳುಹಿಸಲಾಗುತ್ತಿಲ್ಲ' ಎಂದು ಯೋಚಿಸುತ್ತಿದ್ದಳು. ಮಕ್ಕಳೆಲ್ಲ ಜೊತೆಗೂಡಿ ಆಟವಾಡುವುದನ್ನು ಗಮನಿಸಿ ಒಳಗೊಳಗೆ ರೋದಿಸುತ್ತಿದ್ದಳು. ಬಾಲಕಿಯನ್ನು ಕಂಡ ಎನ್‌ಸಿಎಲ್‌ಪಿಎಸ್‌ನ ಕಾರ್ಯಕರ್ತರು, ಆಕೆಯ ತಂದೆಯನ್ನು ಕುರಿತು ತನ್ನ ಮಗಳನ್ನು ಏಕೆ ಶಾಲೆಗೆ ಕಳುಹಿಸುತ್ತಿಲ್ಲ ಎಂದು ಪ್ರಶ್ನಿಸಿದರು. ಆರಂಭದಲ್ಲಿ ಉತ್ತರಿಸಲು ನಿರಾಕರಿಸಿದ ಆತ, ನಿಧಾನವಾಗಿ ಪ್ರತಿಕ್ರಿಸತೊಡಗಿದ. ಕಾರ್ಯಕರ್ತರು ಅವನ ಬಳಿ ತನ್ನ ಮಗಳು ಶಿಕ್ಷಣ ವಂಚಿತಳಾಗಿ ಹೇಗೆ ಸುಂದರ ಹಾಗೂ ಸುಶಿಕ್ಷಿತ ಜೀವನವನ್ನು ಕಳೆದುಕೊಳ್ಳುತ್ತಿದ್ದಾಳೆ ಎನ್ನುವುದನ್ನು ವಿವರಿಸಿದ ನಂತರ, ಒಂದು ಪ್ರಮಾಣದ ಸಂಪಾದನೆಯನ್ನು ಕಳೆದುಕೊಳ್ಳುತ್ತಿದ್ದೇನೆ ಎಂಬುದನ್ನು ಅರಿತೂ, ಆತ ಮಗಳನ್ನು ಶಾಲೆಗೆ ಕಳುಹಿಸಲು ಒಪ್ಪಿದ.

ಸಾಜನ್‌ಳನ್ನು ಸಂಪರ್ಕ ಶಾಲೆಯೊಂದರಲ್ಲಿ ದಾಖಲು ಮಾಡಲಾಯಿತು. ಸಾಜನ್ ಬಹಳ ಚೂಟಿಯಾಗಿದ್ದು, ಪಾಠಗಳನ್ನು ಬಹಳ ಬೇಗ ಕಲಿತಳು. ಇವಳ ನೆನಪಿನ ಶಕ್ತಿ ಹಾಗೂ ಕಲಿಯುವ ರೀತಿಯನ್ನು ಕಂಡು 'ಇದೇ ರೀತಿ ಮುಂದುವರೆದರೆ ಈ ಹುಡುಗಿ ಆರು ತಿಂಗಳಲ್ಲಿ ಎಂಟನೇ ಕ್ಲಾಸ್‌ಗೆ ಸೇರಿಸಬಹುದು' ಎಂದು ಅವಳ ಶಿಕ್ಷಕಿ ಅಭಿಪ್ರಾಯಪಟ್ಟರು. ಎನ್‌ಸಿಎಲ್‌ಪಿಎಸ್‌ನ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುತ್ತ ಸಾಜನ್ 'ನಾನು ಶಾಲೆಗೆ ಸೇರಿರದಿದ್ದರೆ ಏನನ್ನು ಕಳೆದುಕೊಳ್ಳುತ್ತಿದ್ದೆ ಎಂದು ಈಗ ತಿಳಿಯುತ್ತಿದೆ' ಎಂದಳು.

## 'ದನ ಮೇಯಿಸುವ ಕಾಯಕ ಸಾಕು'...

ಚಾಮರಾಜನಗರ ಜಿಲ್ಲೆಯ ಹೊಂಗನೂರು ಗ್ರಾಮದ ಪ್ರಕಾಶನಿಗೆ 14 ವರ್ಷ ವಯಸ್ಸು. ನಿತ್ಯ ದನ ಮೇಯಿಸುವುದು ಅವನ ಕಾಯಕವಾಗಿತ್ತು. ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರುವ ಜವಾಬ್ದಾರಿ ಹೊತ್ತ ಎನ್‌ಸಿಎಲ್‌ಪಿ ಕಾರ್ಯಕರ್ತರು ಈತನನ್ನು ಕುರಿತು ವಿಚಾರಿಸಿದರು. ಮೊದಲಿಗೆ ಹೆದರಿ ಓಡತೊಡಗಿದ ಪ್ರಸಾದ್‌ನನ್ನು ಬೆನ್ನಟ್ಟಿದ ಕಾರ್ಯಕರ್ತರು ಅವನನ್ನು ತಡೆದು ಮಾತನಾಡಿಸಿದಾಗ, ಆತ ಅವರನ್ನು ತನ್ನ ತಂದೆಯ ಬಳಿಗೆ ಕರೆದೊಯ್ದ. ಪ್ರಸಾದ್‌ನ ತಂದೆ ನಂಜುಂಡಯ್ಯ ಕೃಷಿ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದರು. ಪ್ರಸಾದ್ ಇವರ ಮೂರನೆ ಮಗ. ಈತ ಆರನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿ ನಂತರ ದನ ಮೇಯಿಸುವ ಕೆಲಸ ಮಾಡುತ್ತಿದ್ದ. ನಂಜುಂಡಯ್ಯನವರ ಮೊದಲನೆಯ ಮಗ ಪಿಯುಸಿ ಮುಗಿಸಿದ್ದು, ಎರಡನೆಯ ಮಗ ಹತ್ತನೆ ತರಗತಿಯಲ್ಲಿ ಅನುತ್ತೀರ್ಣನಾಗಿ ಆತನೂ ಕೂಡ ಕೂಲಿ ಕೆಲಸ ಮಾಡುತ್ತಿದ್ದ. ಇವರ ಕುಟುಂಬ ಬಡತನದ ಬೇಗೆಯಲ್ಲಿ ಬೇಯುತ್ತಿತ್ತು. ತಂದೆ ನಂಜುಂಡಯ್ಯನವರ ಪ್ರಕಾರ ಪ್ರಸಾದ್ ಆರನೇ ತರಗತಿಯ ನಂತರ ಓದುವುದರಲ್ಲಿ ನಿರಾ-ಸಕ್ತನಾಗಿದ್ದುದರಿಂದ ತಾನಾಗಿಯೇ



**ಪ್ರಸಾದ್ (ಶಾಲೆಗೆ ಸೇರುವ ಮುನ್ನ)**

ಶಾಲೆಗೆ ಹೋಗುವುದನ್ನು ನಿಲ್ಲಿಸಿಬಿಟ್ಟ. ನಂತರದ ದಿನಗಳಲ್ಲಿ ಬೆಳಗಿನಿಂದ ಸಂಜೆಯವರೆಗು ಕಾಡಿನಲ್ಲಿ ದನ ಮೇಯಿಸುವುದು ಇವನ ದಿನನಿತ್ಯದ ಕಾಯಕವಾಗಿಬಿಟ್ಟಿತು. ಈತ ದಿನವೊಂದಕ್ಕೆ 4 ರಿಂದ 6 ಕಿಮೀ ವರೆಗೂ ನಡೆದು ಹೋಗುತ್ತಿದ್ದ.

ಎನ್‌ಸಿಎಲ್‌ಪಿ ಕಾರ್ಯಕರ್ತರು ಪ್ರಸಾದ್‌ನ ಕುಟುಂಬದವರೊಂದಿಗೆ ಚರ್ಚಿಸಿ ಅವನನ್ನು ಮತ್ತೆ ಶಾಲೆಗೆ ಕಳುಹಿಸಲು ಒಪ್ಪಿಸಲು ಬಹಳ ಪ್ರಯತ್ನಪಟ್ಟರು. ಕೊನೆಗೆ ಒಪ್ಪಿಗೆ ಪಡೆದು ಅವನನ್ನು ಹಳ್ಳಿಯ ಬಳಿ ಇರುವ ಸರ್ಕಾರಿ ಶಾಲೆಯಲ್ಲಿ ಎಂಟನೇ ತರಗತಿಗೆ ಸೇರಿಸಲಾಯಿತು.



ಪ್ರಸಾದ್
(ಶಾಲೆಗೆ ಸೇರಿದ ನಂತರ)

ಪ್ರಸಾದ್‌ನ ಕುಟುಂಬದವರಿಗೆ ಸರ್ಕಾರದ ಹಲವಾರು ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಲಾಯಿತು. ಇದರಿಂದ ಪ್ರಸಾದ್‌ನ ತಾಯಿ, ಸ್ಫೂರ್ತಿ ಸ್ವಸಹಾಯ ಸಂಘದ ಸಹಾಯ ಪಡೆದು ತನ್ನ ದುಡಿಮೆಯಲ್ಲಿ ಒಂದು ಪ್ರಮಾಣದ ಹಣವನ್ನು ಕೂಡಿಡಲು ಮುಂದಾದರು. ಪ್ರಸಾದ್‌ನ ಅಣ್ಣ ಯೋಗೇಂದ್ರನಿಗೆ ವಾಹನ ಚಾಲನೆಯ ತರಬೇತಿಯನ್ನು ಕೊಡಿಸಲಾಯಿತು. ಒಂದು ವರ್ಷದ ನಂತರ ಪ್ರಸಾದ್‌ನ ತಾಯಿ ರೂ. 2000 ಸಾಲ ಪಡೆದು ಅದನ್ನು ಹಿಂದಿರುಗಿಸಿದ್ದಲ್ಲದೆ, ರೂ. 920 ಹಣವನ್ನು ಸೇರಿಸಿದ್ದದು ಕಂಡು ಬಂತು. ಇನ್ನೊಂದೆಡೆ ಪ್ರಸಾದ್ ಶಾಲೆಗೆ ಸೇರಿದ ನಂತರ ಸರ್ಕಾರದ ಯೋಜನೆಯಡಿ ಸೈಕಲ್ ಅನ್ನು ಪಡೆದು ದಿನವೂ ಶಾಲೆಗೆ ಹೋಗಿ ಬರುತ್ತಿದ್ದಾನೆ. ಪ್ರಸಾದ್‌ನ ಅಣ್ಣ ಹಳ್ಳಿಯ ಬ್ಯಾಂಕ್‌ವೊಂದರಲ್ಲಿ ವಾಹನ ಕೊಳ್ಳುವುದಕ್ಕೆ ಹಣ ಸಹಾಯ ಕೋರಿ ಅರ್ಜಿಯೂ ಕೂಡ ಹಾಕಿದ್ದುದು ಕಂಡು ಬಂದಿದೆ. ಪ್ರಸಾದ್ ಶಾಲೆಯಲ್ಲಿ ಶ್ರದ್ಧೆಯಿಂದ ಕಲಿತು ಶಿಕ್ಷಕರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ. 'ನಾನು ದೊಡ್ಡವನಾದ ಮೇಲೆ ಪೊಲೀಸ್ ಆಫೀಸರ್ ಆಗ ಬಯಸುತ್ತೇನೆ' ಎಂಬುದು ಪ್ರಸಾದ್‌ನ ಆಶಯ.

ಈ ಉದಾಹರಣೆ ಸಮಯಕ್ಕೆ ಸರಿಯಾದ ಸಹಾಯ ನೀಡುವುದರಿಂದ ಇಂತಹ ಮಕ್ಕಳಿಗೆ ಬಹಳ ಅನುಕೂಲವಾಗುತ್ತದೆ ಹಾಗೂ ಅವರ ಕಲ್ಯಾಣವಾಗುತ್ತದೆ ಎಂಬುದು ತಿಳಿಯುತ್ತದೆ. ಎನ್‌ಸಿಎಲ್‌ಪಿಯು ಈ ಸಾಧನೆಯಿಂದ ಇಂತಹ ಹಲವಾರು ಮಕ್ಕಳು ಇಂದು ತಮ್ಮ ಮುಂದಿನ ಭವಿಷ್ಯದ ಕನಸನ್ನು ಊಹಿಸಿಕೊಳ್ಳುವುದು ಸಾಧ್ಯವಾಗಿದೆ.

**“ ನಾನು ಪೊಲೀಸ್ ಅಧಿಕಾರಿಯಾಗುತ್ತೇನೆ**

**“ *ಪ್ರಸ್ತುತ ಪ್ರಸಾದ್‌ನ ತಾಯಿ ಮಹಿಳಾ ಸ್ವಸಹಾಯ ಸಂಘವೊಂದರಿಂದ ರೂ. 2,000 ಸಾಲ ಪಡೆದು ಹಿಂದಿರುಗಿಸಲು ಸಾಧ್ಯವಾಗಿದೆ. ಶಾಲೆಗೆ ಸೇರಿದ ಪ್ರಸಾದ್, ಸರ್ಕಾರಿ ಯೋಜನೆಯಡಿ ಸೈಕಲ್ ಪಡೆದುಕೊಂಡಿದ್ದಾನೆ. ಇದರಿಂದ ಶಾಲೆಗೆ ಹೋಗಲು ಅನುಕೂಲ ಪಡೆದಕೊಂಡಿದ್ದಾನೆ. ಪ್ರಸಾದ್‌ನ ಅಣ್ಣ ಯೋಗೇಂದ್ರ ವಾಹನ ಚಾಲನೆಯಲ್ಲಿ ತರಬೇತಿ ಪಡದು, ಗ್ರಾಮದ ಬ್ಯಾಂಕ್‌ವೊಂದರಲ್ಲಿ ವಾಹನ ಸಾಲ ಪಡೆಯಲು ಸಾಧ್ಯವಾಗಿದೆ.***

## ದುಡಿಮೆಯಿಂದ ಶಾಲೆಯವರೆಗೆ...

ಅನಿತಾ ಕೇವಲ ನಾಲ್ಕು ವರ್ಷದವಳಾಗಿದ್ದಾಗ ತನ್ನ ತಂದೆಯನ್ನು ಕಳೆದುಕೊಂಡಳು. ಈಕೆ ಅವಳ ತಂದೆ ತಾಯಿಯರಿಗೆ ಮೂರನೆಯ ಮಗಳು. ತಂದೆ–ತಾಯಿ ಸೇರಿ ಅನಿತಾಳ ಕುಟುಂಬದಲ್ಲಿ ಎಂಟು ಮಂದಿ ಇರುತ್ತಾರೆ. ತಾಯಿ ಕೂಲಿ ಕೆಲಸ ಮಾಡಿ ತನ್ನ ಮಕ್ಕಳನ್ನು ಸಾಕಲು ಸಾಕಷ್ಟು ಶ್ರಮ ಪಡುತ್ತಿದ್ದಳು. ಹಗಲು ರಾತ್ರಿ ದುಡಿದರೂ ಅರೆ ಹೊಟ್ಟೆ ತುಂಬಿಸಿಕೊಳ್ಳಲು ಈ ಕುಟುಂಬ ಪರದಾಡುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಅನಿತಾಳ ತಾಯಿ ತನ್ನ ದೊಡ್ಡ ಮಗಳ ಮದುವೆ ಮಾಡಲೆಂದು ಸಾಲದ ಕೂಪದಲ್ಲಿ ಬಿದ್ದಳು. ಮದುವೆಯ ನಂತರ ದಿನ ಕಳೆದಂತೆ ಸರಿಯಾಗಿ ಸಾಲ ತೀರಿಸಲಾಗದಿದ್ದರಿಂದ ಸಾಲಗಾರನ ಕಾಟ ಶುರುವಾಯಿತು. ಇದರಿಂದ ಅನಿತಾಳನ್ನು ಸಾಲಗಾರನ ಮನೆಯಲ್ಲಿ ಮನೆ ಕೆಲಸಕ್ಕೆ ಬಿಡಬೇಕಾದ ಪರಿಸ್ಥಿತಿ ಬಂದೊದಗಿತು. ಆಗ ಅನಿತಾಳ ವಯಸ್ಸು ಕೇವಲ 10 ವರ್ಷ.

ಎನ್‌ಸಿಎಲ್‌ಪಿಎಸ್‌ನ ಕಾರ್ಯಕರ್ತರು ಒಮ್ಮೆ ಅನಿತಳನ್ನು ಮನೆ ಕೆಲಸ ಮಾಡುವುದನ್ನು ಕಂಡು, ಅವಳ ಒಡೆಯನೊಡನೆ ಚರ್ಚಿಸಿದರು. ಪ್ರಾರಂಭದಲ್ಲಿ ಮನೆಯ ಒಡೆಯ ಅನಿತಾಳನ್ನು ಮನೆಗೆ ವಾಪಸ್ ಕಳುಹಿಸಲು ಒಪ್ಪದಿದ್ದರಿಂದ, ಕಾರ್ಯಕರ್ತರು ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವುದು, ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವೆಂದೂ ವಿವರಿಸಿದರು. ಇದರಿಂದಾಗಬಹುದಾಂತಹ ಪರಿಣಾಮಗಳು ಅಂದರೆ ನ್ಯಾಯಾಂಗದ ಮುಂದೆ ತಲೆ ತಗ್ಗಿಸಬೇಕಾಗಬಹುದು ಎಂಬುದನ್ನು ವಿವರಿಸಿದಾಗ ಮನೆಯ ಒಡೆಯ ಅನಿತಾಳನ್ನು ಕಳುಹಿಸಲು ಒಪ್ಪಿದ. ಅನಿತಾ ಬಾಲಕಿಯಾದ್ದರಿಂದ ಕಡಿಮೆ ಸಂಬಳ ಕೊಟ್ಟು ಅವಳಿಂದ ಹೆಚ್ಚು ದುಡಿಸಿಕೊಳ್ಳಲಾಗುತ್ತಿತ್ತು. ಅನಿತಾಳನ್ನು ಮನೆ ಕೆಲಸದಿಂದ ಮುಕ್ತಗೊಳಿಸಿದ ಎನ್‌ಸಿಎಲ್‌ಪಿಯ ಕಾರ್ಯಕರ್ತರು ಅವಳ ಕುಟುಂಬದ ಗಮನಕ್ಕೆ ತಂದು ಬೀದರ್ ಜಿಲ್ಲೆಯಲ್ಲಿರುವ ಹುಮ್ನಾಬಾದ್‌ನ ಸಂಪರ್ಕ ಶಾಲೆಯಲ್ಲಿ ಸೇರಿಸಿದರು. ಶಾಲೆಗೆ ಸೇರಿದ ಒಂದೇ ವರ್ಷದಲ್ಲಿ ಅನಿತಾ ಓದು ಬರಹ ಕಲಿತಳು. 'ನಾನು ಓದಿ ಮುಂದೆ ಟೀಚರ್ ಆಗುತ್ತೇನೆ' ಎಂದು ಹೇಳುವಷ್ಟು ಧೈರ್ಯ, ಆತ್ಮಸ್ಥೈರ್ಯವನ್ನು ಬೆಳೆಸಿಕೊಂಡಿದ್ದಾಳೆ. ಮಕ್ಕಳ ಕಲ್ಯಾಣದೆಡೆಗೆ ಇದೊಂದು ಉತ್ತಮ ಉದಾಹರಣೆ.

**“ *ಸರ್ಕಾರಿ ಹಾಸ್ಟೆಲ್ ಸೇರಿ ಮುಂದ ಓದ-ಬೇಕೆನ್ನುವುದೇ ನನ್ನ ಆಸೆ.***



ಅನಿತಾ

## ಮಾಧ್ಯಮ ನೋಟ

# Boosting child labour eradication efforts

Staff Reporter

**BANGALORE:** Karnataka now has a State Resource Centre (SRC) on Child Labour.

The centre, that is supported by the International Labour Organisation (ILO), is working under the purview of the Karnataka State Child Labour Eradication Project Society, Department of Labour, Karnataka Government.

### Main objective

The main objective of the centre is to work as a nodal agency that coordinates programmes being implemented to combat child labour through district societies in the State. The centre will help network different organisations and activists working for child welfare.

Another aim is also to promote active partnership between the Government and civil society in ensuring child welfare.

### Action plan


The SRC is taking on the responsibility of preparing a "State Action Plan" to eradicate child labour, and all individuals and civil society organisations who are interested in the initiatives may contact it.

The centre has also planned to come out with a bimonthly e-journal on child labour, for which it welcomes contributions from development professionals.

Call Basavaraju K., Deputy Coordinator of the State Resource Centre, on 26531258, 26531259, 26531260 (extension number 152) for further details.

ದಿ ಹಿಂದೂ ಪತ್ರಿಕೆಯ ಅಕ್ಟೋಬರ್ 2009ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನ

## ಇಲ್ನೊಮ್ಮೆ ನೋಡಿ ಪ್ಲೀಜ್!



ಎಳೆಯ ಭುಜಗಳ ಮೇಲೆ ದರ್ಪ

*Internet source*

## ಸುದ್ದಿ ಸ್ವಾರಸ್ಯ

### ಮಕ್ಕಳ ಹಕ್ಕುಗಳಿಗಾಗಿ ಪ್ರಿಯಾಂಕ



ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾಗಿರುವ ಫ್ಯಾಷನ್ ಬ್ರಾಂಡ್ ಇಟಲಿಯ 'ಬಲ್ಗಾರಿ' ಕಂಪನಿಯು ತನ್ನ 125ನೇ ವರ್ಷಾಚರಣೆಯ ಆಚರಿಸುತ್ತಿದೆ. ತನ್ನ ವರ್ಷಾಚರಣೆಯ ನೆನಪಿಗಾಗಿ 'ಬಲ್ಗಾರಿ' ಮಕ್ಕಳ ರಕ್ಷಣೆಗಾಗಿ ಅಭಿಯಾನ ಆರಂಭಿಸುತ್ತಿದೆ. ಬಾಲಿವುಡ್‌ನ ಪ್ರಸಿದ್ಧ ನಟಿ ಪ್ರಿಯಾಂಕ ಚೋಪ್ರಾರನ್ನು ಈ ಅಭಿಯಾನದ ಸಂಪನ್ಮೂಲ ಕ್ರೋಢೀಕರಣ ಯೋಜನೆಯ ರಾಯಭಾರಿಯನ್ನಾಗಿ ಆಯ್ಕೆ ಮಾಡಿದೆ. 'ಬಲ್ಗಾರಿ', ಮಕ್ಕಳ ಹಕ್ಕುಗಳಿಗಾಗಿ ದುಡಿಯುತ್ತಿರುವ ಅಂತಾರ್ರಾಷ್ಟ್ರೀಯ ಖ್ಯಾತಿಯ ಹಾಗೂ 100 ದೇಶಗಳಲ್ಲಿ ತನ್ನ ಶಾಖೆಗಳನ್ನು ಹೊಂದಿರುವ ಸಂಸ್ಥೆಯಾದ 'ಸೇವ್ ದಿ ಚಿಲ್ಡ್ರನ್'ನ 'ರಿರೈಟ್ ದಿ ಫ್ಯೂಚರ್' ಅಭಿಯಾನಕ್ಕೆ ಬೆಂಬಲ ಸೂಚಿಸಿ ಅದರೊಡನೆ ಕೈಜೋಡಿಸಿದೆ. 'ಸೇವ್ ದಿ ಚಿಲ್ಡ್ರನ್', ಈ ಅಭಿಯಾನದಡಿ 2010ರೊಳಗೆ ಪ್ರಪಂಚಾದ್ಯಂತ ತೊಂದರೆಗೊಳಗಾದ ಪ್ರದೇಶಗಳಲ್ಲಿ ವಾಸಿಸುತ್ತಿರುವ 80 ಲಕ್ಷ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ ಪಣ ತೊಟ್ಟಿದೆ.

http://timesofindia.indiatimes.com

## ಸಂಕ್ಷಿಪ್ತ ಸುದ್ದಿ

- *ಅಭಿವೃದ್ಧಿಗಾಗಿ ದುಡಿಯುತ್ತಿರುವ ಹಲವು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಜೊತೆಗೂಡಿ, ಉತ್ತರ ಕರ್ನಾಟಕದ ನೆರೆ ಸಂತ್ರಸ್ಥರ ನೆರವಿಗಾಗಿ ಅಂತರ್ಜಾಲದಲ್ಲಿ 'ನೆರವು' (nerevunk.blogspot.com) ಎಂಬ ಬ್ಲಾಗ್ ಅನ್ನು ಸ್ಥಾಪಿಸಿ, ಹಾನಿಗೊಳಗಾದ ಪ್ರದೇಶಗಳ ನಿಖರವಾದ ಮಾಹಿತಿ ಒದಗಿಸುವುದರ ಮೂಲಕ ವಿಶಿಷ್ಟ ರೀತಿಯಲ್ಲಿ ಸೇವೆ ಒದಗಿಸುತ್ತಿದೆ.*
- *ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ರಕ್ಷಣೆಗೆ ದುಡಿಯುತ್ತಿರುವ ಉತ್ತರ ಪ್ರದೇಶ ಮೂಲದ 'ಸಕ್ಷಮ್ ಫೌಂಡೇಷನ್' ಎಂಬ ಸ್ವಯಂ ಸೇವಾ ಸಂಸ್ಥೆ, ಮಕ್ಕಳ ರಕ್ಷಣೆ ಘಟಕವನ್ನು ಸ್ಥಾಪಿಸುವಂತೆ ಉತ್ತರ ಪ್ರದೇಶ ಸರ್ಕಾರವನ್ನು ಮನವಿ ಮಾಡಿದೆ.*
- *೨೦೧೦-೨೦೧೧ ರಿಂದ ಒಂದನೆ ತರಗತಿ ಶಾಲಾ ದಾಖಲಾತಿ ವಯೋಮಿತಿಯನ್ನು ಐದು ವರ್ಷ ಮೇಲ್ಪಟ್ಟಂತೆ (೨೦೧೦ರ ಮೇ ೩೧) ಕಡ್ಡಾಯಗೊಳಿಸಿ ಕರ್ನಾಟಕ ಸರ್ಕಾರ ಹೊಸ ನೀತಿಯನ್ನು ಜಾರಿಗೊಳಿಸಿದೆ. ಈ ನೀತಿಯು ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳಿಗೆ ಅನ್ವಯವಾಗುತ್ತದೆ.*
- *ರಾಜ್ಯ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರವು ಕರ್ನಾಟಕ ರಾಜ್ಯ ಬಾಲಕಾರ್ಮಿಕ ಕ್ರಿಯಾ ಯೋಜನೆಯ ಪುನರ್‌ರಚನೆಯ ಜವಾಬ್ದಾರಿಯನ್ನು ತೆಗೆದುಕೊಂಡಿದೆ.*
- *ರಾಜ್ಯ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರವು ಕರ್ನಾಟಕ ರಾಜ್ಯ ಬಾಲಕಾರ್ಮಿಕ ಕ್ರಿಯಾ ಯೋಜನೆಯ ಪುನರ್‌ರಚನೆಯ ಜವಾಬ್ದಾರಿಯನ್ನು ತೆಗೆದುಕೊಂಡಿದೆ.*

# ಬಾಲಕಾರ್ಮಿಕರಲ್ಲಿ 'ಪ್ರೇರಣ'

**ಟೀಚರ್:** ನಿನ್ನ ಹೆಸರನ್ನು ಇಂಗ್ಲೀಷ್‌ನಲ್ಲಿ ಬರಿ
**ಬಾಲಕಿ:** L.A.K.S.H.M.I.
**ಟೀಚರ್:** ನಿನ್ನ ತಂದೆ–ತಾಯರ ಹೆಸರನ್ನು ಕನ್ನಡದಲ್ಲಿ ಬರೆದು ತೋರಿಸು
**ಬಾಲಕಿ:** ತಂದೆ: ನರಸಪ್ಪ, ತಾಯಿ: ನಾಗಮ್ಮ
ಟೀಚರ್: 1 ರಿಂದ 100 ರವರೆಗೂ ಇಂಗ್ಲೀಷ್ ಅಂಕಿಗಳನ್ನು ಬರಿ
**ಬಾಲಕಿ:** 1, 2, 3, 4 ...



ಒಂಬತ್ತು ವರ್ಷ ಪ್ರಾಯದ ಬಾಲಕಿ ಲಕ್ಷ್ಮಿ ರಾಯಚೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ 'ಪ್ರೇರಣ', ಎಂಬ ಸರ್ಕಾರೇತರ ಸಂಸ್ಥೆಯೊಂದು ನಡೆಸುತ್ತಿರುವ ಸಂಪರ್ಕ ಶಾಲೆಯಲ್ಲಿ ಕಲಿಯುತ್ತಿರುವ ಬಾಲಕಿ. ಒಂದು ದಿನ ಶಾಲೆಗೆ ಆಹ್ವಾನದ ಮೇರೆಗೆ ಬಂದಿದ್ದ ಇನ್ಫೋಸಿಸ್‌ನ ಸುಧಾಮೂರ್ತಿಯವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋದಳು. ಬಾಲಕಿಯ ಬುದ್ಧಿಚಾತುರ್ಯತೆ, ತೀಕ್ಷ್ಣ ಪ್ರತಿಕ್ರಿಯೆಯನ್ನು ಕಂಡು ಸ್ವತಃ ಶ್ರೀಮತಿ ಸುಧಾಮೂರ್ತಿಯವರು ಬೆರಗಾದರು.

ಲಕ್ಷ್ಮಿಯ ತಂದೆ–ತಾಯಂದಿರು ಕೃಷಿ ಕೂಲಿ ಕಾರ್ಮಿಕರು. ಐದು ಮಕ್ಕಳಲ್ಲಿ ಲಕ್ಷ್ಮಿ ಎರಡನೆಯವಳು. ಲಕ್ಷ್ಮಿಯ ಅಣ್ಣ ಬಸವರಾಜು ಎಂಟನೆ ತರಗತಿಯಲ್ಲಿ ಓದುತ್ತಿದ್ದಾನೆ ಹಾಗೂ ಈಕೆಯ ಮೂವರು ತಂಗಿಯರು ಸಹ ಶಾಲೆಗೆ ಹೋಗುತ್ತಿದ್ದಾರೆ. ಕಿತ್ತು ತಿನ್ನುವ ಬಡತನದಿಂದಾಗಿ ಈಕೆಯ ಪೋಷಕರು ಹಿರಿಯಳಾದ ಲಕ್ಷ್ಮಿಯನ್ನು ಶಾಲೆ ಬಿಡಿಸಿ ಕೂಲಿ ಕೆಲಸದಲ್ಲಿ ತೊಡಗಿಸಿದ್ದರು. ತಂದೆ ನರಸಪ್ಪನವರದು ಐದು ಮಕ್ಕಳು ಹಾಗೂ ತಾತ–ಅಜ್ಜಿ ಇರುವಂತಹ ದೊಡ್ಡ ಕುಟುಂಬ. ತಿಂಗಳೆಲ್ಲ ದುಡಿದರೂ ಅರೆ ಹೊಟ್ಟೆ ತುಂಬಿಸಿಕೊಳ್ಳುವಷ್ಟು ಸಂಪಾದನೆ ಈ ಕುಟುಂಬಕ್ಕೆ ಅಸಾಧ್ಯವಾದ ಮಾತಾಗಿತ್ತು. ಕುಟುಂಬದ ಒಟ್ಟು ಸಂಪಾದನೆ ವರ್ಷಕ್ಕೆ ರೂ. 10,000ಕ್ಕಿಂತ ಕಡಿಮೆಯಾಗಿತ್ತು. ಲಕ್ಷ್ಮಿ 2007ರಲ್ಲಿ ಮೂರನೆ ತರಗತಿಯ ತನಕ ಓದಿದ್ದಳು. ಆದಾದ ನಂತರ ಇವಳು ಕೃ ಕೂಲಿ ಕೆಲಸ, ದನ ಮೇಯಿಸುವುದು ಹಾಗೂ ಮನೆಗೆಲಸದಲ್ಲಿ ತೊಡಗಿದ್ದಳು.

ಒಂಬತ್ತು ವರ್ಷದ ಬಾಲಕಿಯೊಬ್ಬಳಿಗೆ 1 ರಿಂದ 100ರವರೆಗೆ ಇಂಗ್ಲೀಷ್ ಸಂಖ್ಯೆಗಳನ್ನು ಹೇಳುವುದು ಅಥವಾ ಬರೆಯುವುದು ಬರುವುದಿಲ್ಲ ಎಂದಾಗ ಆಶ್ಚರ್ಯವಾಗುವುದು ನಿಜ. ಆದರೆ ಇಂತಹ ಅಸಂಖ್ಯಾತ ಮಕ್ಕಳು ಈ ದೇಶದಲ್ಲಿ ಇದ್ದಾರೆ. ಈ ಪರಿಸ್ಥಿತಿ ಅವರಿಗೆ ಹಲವು ಕಾರಣಗಳಿಂದ ಶಾಲೆಯಿಂದ ಹೊರ ಬಂದಿರುವುದು ಅಥವಾ ಎಂದೂ ಶಾಲೆಗೆ ಹೋಗದಿರುವುದೇ ಕಾರಣ. ಲಕ್ಷ್ಮಿಯ ವಿಷಯದಲ್ಲಿ ಆಕೆಯ ತಾತ–ಅಜ್ಜಿಯರಿಗೆ ಇಷ್ಟವಿದ್ದರೂ ಆಕೆಯ ಪೋಷಕರು ಎದುರಿಸುತ್ತದ್ದ ಬಡತನದಿಂದಾಗಿ ಶಾಲೆಗೆ ಕಳುಹಿಸುವ ಪರಿಸ್ಥಿತಿಯಲ್ಲಿ ಇರಲಿಲ್ಲ.

ಲಕ್ಷ್ಮಿಯನ್ನು ಕಂಡ 'ಪ್ರೇರಣ' ಸಂಸ್ಥೆಯ ಕಾರ್ಯಕರ್ತರು ಆಕೆಯ ಪೋಷಕರನ್ನು ಬಹಳ ಪ್ರಯತ್ನದ ನಂತರ ಒಪ್ಪಿಸಿ ಆಕೆಯನ್ನು ಸಂಸ್ಥೆ ನಡೆಸುತ್ತಿರುವ 'ಪುನಶ್ಚೇತನ' ಯೋಜನೆಯಡಿ ಸಂಪರ್ಕ ಶಾಲೆಗೆ ಸೇರಿಸಿದರು. ಶಾಲೆಗೆ ಸೇರಿದ 6 ತಿಂಗಳಲ್ಲಿ ಲಕ್ಷ್ಮಿ ಲೆಕ್ಕಗಳು, ಕನ್ನಡ, ಇಂಗ್ಲೀಷ್ ಅಕ್ಷರಗಳು ಎಲ್ಲವನ್ನು ಕಲಿತಳು. ಈಕೆಯ ಕಲಿಕೆಯನ್ನು ಕಂಡ ಶಾಲೆಯ ಶಿಕ್ಷಕರು, ಇವಳು ಈ ಗತಿಯಲ್ಲಿ ಕಲಿತರೆ ಇನ್ನು ಆರು ತಿಂಗಳಲ್ಲಿ ಎಂಟನೆ ತರಗತಿಗೆ ಮುಖ್ಯವಾಹಿನಿ ಶಾಲೆಯೊಂದರಲ್ಲಿ ದಾಖಲಿಸಬಹುದು ಎಂದರು.

'ಪ್ರೇರಣ', ರಾಯಚೂರು ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಹಾಗೂ ಇನ್ನಿತರ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವಂತಹ ಒಂದು ಸಂಸ್ಥೆ. ಈ ಸಂಸ್ಥೆಯನ್ನು 1990ರಲ್ಲಿ ಸ್ಥಾಪಿಸಲಾಯಿತು. ಇದರ ರೂವಾರಿ ಶ್ರೀ ಪ್ರಮೋದ್ ಕುಲಕರ್ಣಿ. 'ಪ್ರೇರಣ'ದ 'ಪುನಶ್ಚೇತನ' ಕಾರ್ಯಕ್ರಮದಡಿ, 6 ರಿಂದ 14 ವರ್ಷ ವಯಸ್ಸಿನ ಹೆಣ್ಣು ಮಕ್ಕಳ (ಬಾಲ ಕರ್ಮಿಕರು) ಕಲ್ಯಾಣಕ್ಕಾಗಿ ದುಡಿಯುತ್ತಿದೆ. ರಾಯಚೂರು ಜಿಲ್ಲೆಯಾದ್ಯಂತ ಲಕ್ಷ್ಮಿಯಂತಹ 1,000 ಮಕ್ಕಳನ್ನು ಶೈಕ್ಷಣಿಕವಾಗಿ ಮುಖ್ಯವಾಹಿನಿಗೆ ತಂದ ಹೆಗ್ಗಳಿಕೆ ಈ ಸಂಸ್ಥೆಗೆ ಸೇರುತ್ತದೆ. 'ಪುನಶ್ಚೇತನ' ಯೋಜನೆಯನ್ನು ನವ ದೆಹಲಿಯ ಐಐಎಂಪಿಎಸಿಟಿಯ (IIMPACT) ಸಹಯೋಗದೊಂದಿಗೆ ಸಂಸ್ಥೆಯಿಂದ ಜಾರಿಗೊಳಿಸಿದೆ. ಇದಲ್ಲದೆ 'ಪ್ರೇರಣ' ಹಲವು ಯೋಜನೆಗಳಲ್ಲಿ ತೊಡಗಿಸಿಕೊಂಡಿದೆ. ಬಡ ಶಾಲಾ ಮಕ್ಕಳಿಗೆ ವಿದ್ಯಾರ್ಥಿವೇತನ ಹಾಗೂ ಶೈಕ್ಷಣಿಕ ಸಹಾಯ ಕೊಡುವ ಯೋಜನೆ, ಭಾರತ ಸರ್ಕಾರದ ಎನ್‌ಆರ್‌ಇಜಿಎ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು, ಸರ್ ದೊರಬ್‌ಜಿ ಟಾಟಾ ಟ್ರಸ್ಟ್‌ನ ಸಹಯೋಗದೊಂದಿಗೆ ತೆಗೆದುಕೊಂಡಿರುವ ಯೋಜನೆ, ಇವೇ ಮುಂತಾದವು ಈ ಸಂಸ್ಥೆ ಪ್ರಸ್ತುತದಲ್ಲಿ ತೊಡಗಿಸಿಕೊಂಡಿದೆ. 'ನವ ಜೀವನ ಮಹಿಳಾ ಒಕ್ಕೂಟ' ಎಂಬ ಯೋಜನೆಯಡಿ ದೇವದಾಸಿ ಪದ್ಧತಿ ನಿರ್ಮೂಲನಾ ಯೋಜನೆಯಲ್ಲಿ ಸಹ 'ಪ್ರೇರಣ' ತೊಡಗಿಸಿಕೊಂಡಿದೆ. ಉತ್ತಮ ಆರೋಗ್ಯ, ಶಿಕ್ಷಣ ಹಾಗೂ ಇನ್ನಿತರ ಕಲ್ಯಾಣ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ಉತ್ತರ ಕರ್ನಾಟಕದಾದ್ಯಂತ ಹೆಸರು ಮಾಡಿದೆ.

ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಸಂಬಂಧಪಟ್ಟಂತೆ ರಾಯಚೂರು ಜಿಲ್ಲೆ ರಾಜ್ಯದಲ್ಲಿ ಕೊನೆಯ ಸಾಲಿನಲ್ಲಿದೆ. ಅಭಿವೃದ್ಧಿಗಾಗಿ ದುಡಿಯುತ್ತಿರುವ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗೆ ಇಂತಹ ಸ್ಥಳದಲ್ಲಿ ಕೆಲಸ ಮಾಡುವುದೊಂದು ಸವಾಲಾಗಿದೆ. ಈ ನಿಟ್ಟಿನಲ್ಲಿ 'ಪ್ರೇರಣ' ಉತ್ತರ ಕರ್ನಾಟಕದಲ್ಲಿ ಉತ್ತಮವಾದ ಕೆಲಸವನ್ನು ಮಾಡಿ, ತನ್ನದೇ ಆದ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.



**ಶ್ರೀಮತಿ ಸುಧಾಮೂರ್ತಿ ರಾಚಯಚೂರಿನಲ್ಲಿ 'ಪ್ರೇರಣ ನಡೆಸುತ್ತಿರುವ ಸಂಪರ್ಕ ಶಾಲೆಯ ಮಕ್ಕಳೊಂದಿಗೆ ಮಾತನಾಡುತ್ತಿರುವುದು.**

# ಮೊಜಾಂಬಿಕ್‌ನಲ್ಲಿ ಮಕ್ಕಳ ಹಾಗೂ ಮಹಿಳೆಯರ ಕಲ್ಯಾಣಕ್ಕಾಗಿ ಯುನಿಸೆಫ್

## ಮಕ್ಕಳ ರಕ್ಷಣೆ

**ಬೆಳವಣಿಗೆಗಳು ಮತ್ತು ಸವಾಲುಗಳು**

ಮೊಜಾಂಬಿಕ್ ರಾಷ್ಟ್ರದ ಹಲವು ಭಾಗಗಳಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆ ಘಟನೆಗಳು ಹೆಚ್ಚುತ್ತಿವೆ. ಈ ನಿಟ್ಟಿನಲ್ಲಿ ಹಲವು ಕಾನೂನು ಬದಲಾವಣೆಗಳನ್ನು ಮಾಡಲಾಗಿದ್ದರೂ, ಹೆಚ್ಚುತ್ತಿರುವ ಘಟನೆಗಳು ಮೊಜಾಂಬಿಕ್ ಸರ್ಕಾರಕ್ಕೆ ಒಂದು ಸವಾಲಾಗಿದೆ.

**ಮಕ್ಕಳ ಅಪಹರಣ**

ಮಕ್ಕಳನ್ನು ಅಪಹರಿಸಿ ಅವರನ್ನು ಮನೆಗೆಲಸಕ್ಕೆ ಹಾಗೂ ಇನ್ನಿತರ ಅನಿಷ್ಟ ಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು ಹೆಚ್ಚುತ್ತಿವೆ. ಇಂಟರ್‌ನ್ಯಾಷನಲ್ ಆರ್ಗನೈಜೇಷನ್ ಆನ್ ಮೈಗ್ರೇಷನ್ ಎಸ್ಟಿಮೇಟ್ಸ್ ನ ವರದಿಯೊಂದರ ಪ್ರಕಾರ ವರ್ಷವೊಂದಕ್ಕೆ ಸುಮಾರು 1,000 ಮಕ್ಕಳು ಮತ್ತು ಮಹಿಳೆಯರನ್ನು ಈ ದೇಶದಿಂದ ಅಪಹರಿಸಿ ಹಲವಾರು ಕಾನೂನುಬಾಹಿರ ಕೆಲಸಗಳಿಗಾಗಿ ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಲಾಗುತ್ತಿದೆ.

**ಬಾಲಕಾರ್ಮಿಕತೆಯ ಸ್ವರೂಪ**

ಮೊಜಾಂಬಿಕ್ ರಾಷ್ಟ್ರದಲ್ಲಿ ಕೂಡ ಬಾಲಕಾರ್ಮಿಕತೆಯ ಪ್ರಮಾಣ ಹೆಚ್ಚಿದೆ. ಹತ್ತಿ ಹಾಗೂ ತಂಬಾಕು ಕಷ್ಯಿಯಲ್ಲಿ ಮಕ್ಕಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ಬಹುಪಾಲು ಮಕ್ಕಳಿಗೆ ಇದು ವಂಶಪಾರಂಪರಿಕ ವೃತ್ತಿಯಾಗಿದೆ. ಒಂದು ಅಂದಾಜಿನ ಪ್ರಕಾರ ಶೇ.32ರಷ್ಟು 7 ರಿಂದ 17 ವರ್ಷ ವಯಸ್ಸಿನ ಮಕ್ಕಳು ಹಲವು ರೀತಿಯ ಕೆಲಸಗಳಲ್ಲಿ ದುಡಿಯುತ್ತಿದ್ದಾರೆ.

**ಮಕ್ಕಳ ನೋಂದಣಿ**

ಇತ್ತೀಚಿನ ವರ್ಷಗಳಲ್ಲಿ ಮೊಜಾಂಬಿಕ್ ಸರ್ಕಾರ ಮಕ್ಕಳ ನೋಂದಣಿ ಪ್ರಕ್ರಿಯೆಯನ್ನು ರಾಷ್ಟ್ರಾದ್ಯಂತ ಬಲಪಡಿಸಿದೆ. 2004ನೇ ಇಸವಿಯಲ್ಲಿ ಅಲ್ಲಿನ ಸರ್ಕಾರ ಮಕ್ಕಳ ನೋಂದಣಿಗೆ ಸಂಬಂಧಿಸಿದ ರ್‍ಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಜಾರಿಗೊಳಿಸುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿತು. ಇದಕ್ಕೂ ಮುನ್ನ ಮೊಜಾಂಬಿಕ್ ರಾಷ್ಟ್ರದಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ನೋಂದಣಿ ಪ್ರಮಾಣ ಕೇವಲ ಶೇ.6ರಷ್ಟಿತ್ತು. ಅಲ್ಲಿಂದೀಚೆಗೆ 18 ವರ್ಷದ ಕೆಳಗಿನ ವಯಸ್ಸಿನ, 4.2 ಮಿಲಿಯನ್ ಮಕ್ಕಳನ್ನು ನೋಂದಾಯಿಸಿಲಾಗಿದೆ.

**ತಬ್ಬಲಿ ಮಕ್ಕಳು**

ಮೊಜಾಂಬಿಕ್ ರಾಷ್ಟ್ರದಲ್ಲಿ ಅಂದಾಜು 1.6 ಮಿಲಿಯನ್ ತಬ್ಬಲಿ ಮಕ್ಕಳಿದ್ದಾರೆ. ಇದರಲ್ಲಿ 420,000 ಮಕ್ಕಳ ತಂದೆ-ತಾಯಿಯರು ಮಾರಕ ಏಡ್ಸ್ ರೋಗಕ್ಕೆ ಬಲಿಯಾದವರು. ಇನ್ನೊಂದು ಅಂದಾಜಿನ ಪ್ರಕಾರ ಮೊಜಾಂಬಿಕ್‌ನಲ್ಲಿ 2010ರ ವೇಳೆಗೆ ಈ ಕಾರಣದಿಂದಾಗ ತಬ್ಬಲಿಗಳ ಸಂಖ್ಯೆಗೆ 500,000ಕ್ಕೇ ಏರಲಿದೆ.

**ಮಕ್ಕಳ ರಕ್ಷಣೆಗೆ ಕ್ರಮಗಳು**

ಇಂತಹ ಪರಿಸ್ಥಿತಿಯ ನಡುವೆ ಅಲ್ಲಿನ ಸರ್ಕಾರ ಮಕ್ಕಳ ರಕ್ಷಣೆಗಾಗಿ ಹಾಗೂ ಮಕ್ಕಳ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದೆ.

**ಕಾನೂನು ಚೌಕಟ್ಟು**

ಮೊಜಾಂಬಿಕ್ ಸರ್ಕಾರ ಜಾರಿಗೊಳಿಸಿದ ಮಕ್ಕಳ ಕಾಯ್ದೆ 2008 ಈ ನಿಟ್ಟಿನಲ್ಲಿ ಮಹತ್ತರವಾದ ಸಾಧನೆಯಾಗಿದೆ. ಈ ಕಾಯ್ದೆಯಂತೆ ಮಕ್ಕಳ ರಕ್ಷಣೆಗೆ ವಿಶೇಷವಾದ ಒತ್ತು ನೀಡುವುದು ಅನಿವಾರ್ಯವಾಗಿದೆ.

ಹಿಂಸೆಗೊಳಗಾದ ಮಕ್ಕಳು ಮತ್ತು ಮಹಿಳೆಯರ ರಕ್ಷಣೆಗಾಗಿ ಮೊಜಾಂಬಿಕ್ ಸರ್ಕಾರ ಯುನಿಸೆಫ್‌ನ ಸಹಯೋಗದೊಂದಿಗೆ 200ಕ್ಕೂ ಹೆಚ್ಚು ವಿಶೇಷ ಪೊಲೀಸ್ ಠಾಣೆಗಳನ್ನು ದೇಶದಾದ್ಯಂತ ಆರಂಭಿಸಿದೆ. ಇದು ಯುನಿಸೆಫ್‌ನ ಇನ್ನೊಂದು ಪ್ರಮುಖ ಸಾಧನೆ.

**ಸಾಮಾಜಿಕ ರಕ್ಷಣೆ**

ಹಿಂಸೆಗೊಳಗಾಗಿರುವ ಮಹಿಳಾ ಮತ್ತು ಮಕ್ಕಳ ಉದ್ಧಾರಕ್ಕಾಗಿ ಯುನಿಸೆಫ್‌ನ ವತಿಯಿಂದ ಸಾಮಾಜಿಕ ರಕ್ಷಣಾ ಯೋಜನೆಯಡಿ ಧನಸಹಾಯ ಒದಗಿಸಲಾಗುತ್ತಿದೆ.

ಕಳೆದ ಎರಡು ವರ್ಷಗಳಲ್ಲಿ ಧನಸಹಾಯ ಪಡೆಯುತ್ತಿರುವ ಕುಟುಂಗಳ ಸಂಖ್ಯೆ 90,000 ದಿಂದ 120,000ಕ್ಕೇರಿದೆ.



# ಸ್ವಯಂ ಸೇವಾ ಸಂಸ್ಥೆಗಳಿಗೆ ಲಭ್ಯವಿರುವ ಅನುದಾನ

**ದಿ ಇಂಟರ್‌ನ್ಯಾಷನಲ್ ಪ್ಲಾನ್ಡ್ ಪೇರೆಂಟ್‌ಹುಡ್ ಫೆಡರೇಷನ್ (ಐಪಿಪಿಎಫ್)**ನ 'ಭೌಗೋಳಿಕ ಆರೋಗ್ಯ' ಕಾರ್ಯಕ್ರಮದಡಿಯಲ್ಲಿ, ನಾಗರೀಕ ಸಮಾಜ ಸಂಘ ಸಂಸ್ಥೆಗಳಿಗಾಗಿ ನೀಡುವ ಅನುದಾನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ. 'ಐಪಿಪಿಎಫ್' ಸಾರ್ವತ್ರಿಕ ಆರೋಗ್ಯ 2015 ಎಂಬ ಕಾರ್ಯಕ್ರಮವನ್ನು ಹ"ಮ್ಮಿಕೊಂಡಿದ್ದು, ಈ ಅನುದಾನವನ್ನು ಈ ಕಾರ್ಯಕ್ರಮದಡಿಯಲ್ಲಿ ನೀಡಲಾಗುತ್ತಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಫೆಬ್ರುವರಿ 15, 2010.

**ಯುನಯಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವೆಲಪ್‌ಮೆಂಟ್ (ಯುಎಸ್‌ಎಐಡಿ)ನ,** ಆಫೀಸ್ ಡೆವೆಲಪ್‌ಮೆಂಟ್ ಪಾರ್ಟನರ್ಸ್ (ಓಡಿಪಿ) ಹಾಗೂ ಡಿ"ಜನ್ ಆಫ್ ಪ್ರೈವೇಟ್ ಅಂಡ್ ವಾಲಂಟರಿ ಕೋಆಪರೇಷನ್ (ಪಿ"ಸಿ) ವತಿಂದ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ (ಭಾರತವೂ ಸೇರಿದಂತೆ) ಕಾರ್ಯ ನಿರ್ವ"ಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗಾಗಿ 'ಅಭಿವೃದ್ಧಿ' ಕಾರ್ಯಕ್ರಮವಗಳಿಗಾಗಿ "ಶೇಷ ಅನುದಾನವನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಫೆಬ್ರುವರಿ 12, 2010.

**ದಿ ಯುರೋಪಿಯನ್ ಕಮಿಷನ್** ವತಿಯಿಂದ, ಅಂತಾರ್‍ಾಷ್ಟ್ರೀಯ ಮಾನವ ಹಕ್ಕುಗಳ ಶಿಕ್ಷಣ ತರಬೇತಿಗೆ ಸಂಬಂದಿಸಂತೆ ಅನುದಾನವನ್ನು ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಎನ್‌ಜಿಓಗಳು ಹಾಗೂ ಇತರೆ ಅಭಿವೃದ್ಧಿ ಸಂಸ್ಥೆಗಳು ಅನುದಾನಕ್ಕೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮಾರ್ಚ್ 2, 2010.

ಹೆಚ್ಚಿನ ಮಾಹಿತಿಗಾಗಿ
**editorsrc@yahoo.com**ಗೆ
ಇ-ಮೇಲ್ ಮಾಡಿ

# ಪುಸ್ತಕ ವಿಮರ್ಶೆ


## ಸಮುದಾಯ ಕಾರ್ಯಕರ್ತರಿಗೊಂದು ಕೈಪಿಡಿ

ಸ್ವಾಮಿ ವಿವೇಕಾನಂದ ಇನ್ಸ್‌ಟಿಟ್ಯೂಟ್ ಆಫ್ ಲೀಡರ್‌ಪ್ ಡೆವೆಲೆಪ್‌ಮೆಂಟ್ ಸಂಸ್ಥೆಯಿಂದ ಹೊರತಂದಿರುವ **'ವಿವೇಕ ಚೇತನ',** ಸಮುದಾಯ ಕಾರ್ಯಕರ್ತರಿಗೆ ಬಹಳ ಉಪಯುಕ್ತವಾದ ಕೈಪಿಡಿ. ಈ ಪುಸ್ತಕವು ಸರ್ಕಾರದ ಹಲವು ಯೋಜನೆಗಳು, ಸಾಮಾಜಿಕ ಪಿಡುಗುಗಳು, ಮಕ್ಕಳ ನ್ಯಾಯ ಮತ್ತು ಹಕ್ಕುಗಳು, ಶಾಲೆಗಳ ಅಭಿವೃದ್ಧಿಯಲ್ಲಿ ಎಸ್‌ಡಿಎಂಸಿಗಳ ಪಾತ್ರ, ಬಾಲಕಾರ್ಮಿಕತೆ ನಿರ್ಮೂಲನೆಗೆ ಸರ್ಕಾರದ ಯೋಜನೆಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳಿಗೆ ಸಂಬಂಧಪಟ್ಟಂತಹ ಮಾಹಿತಿಯನ್ನು ಒದಗಿಸುತ್ತದೆ. ಸಾಮುದಾಯ ಕಾರ್ಯಕರ್ತರು ತಮ್ಮ ಕೆಲಸವನ್ನು ಹೇಗೆ ನಿರ್ವಹಿಸಬೇಕು ಎನ್ನುವ ಕುರಿತು ದೀರ್ಘ ಮಾಹಿತಿ ಈ ಪುಸ್ತಕದಲ್ಲಿದೆ.




## 'ಮಕ್ಕಳ ಗ್ರಾಮ ಸಭೆ'

'ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್' ಸಂಸ್ಥೆಯಿಂದ ಹೊರ ತಂದಿರುವ ಈ ಪುಸ್ತಕದಲ್ಲಿ 'ಮಕ್ಕಳ ಗ್ರಾಮ ಸಭೆ'ಯ ಧ್ಯೇಯೋದ್ದೇಶಗಳು, ಪ್ರಾಮುಖ್ಯತೆ, ಉಪಯೋಗಗಳ ಕುರಿತು ಸುದೀರ್ಘ ಮಾಹಿತಿ ಸಿಗುತ್ತದೆ. 'ಮಕ್ಕಳ ಗ್ರಾಮ ಸಭೆ'ಗಳ ಯಶಸ್ಸಿಗಾಗಿ ಮಾಡಬೇಕಾಗಿರುವಂತಹ ಬದಲಾವಣೆಗಳು ಹಾಗೂ ಇನ್ನಿತರ ಉಪಯುಕ್ತ ಮಾಹಿತಿ ಈ ಪುಸ್ತಕದಲ್ಲಿ ದೊರೆಯುತ್ತದೆ. ಈ ಸಭೆಗಳಲ್ಲಿ ಮಕ್ಕಳ ಭಾಗವಹಿಸುವಿಕೆಯ ಪ್ರಾಮುಖ್ಯತೆ, ಎಲ್ಲಿ, ಹೇಗೆ, ಯಾರ ನೇತೃತ್ವದಲ್ಲಿ ಈ ಸಭೆಗಳು ನಡೆಯಬೇಕೆಂಬ ಬಗ್ಗೆ ವಿವರಗಳು ಹಾಗೂ ಅನಿಸಿಕೆಗಳು ಈ ಪುಸ್ತಕದಲ್ಲಿದೆ. ಕನ್ನಡದಲ್ಲಿ ಪ್ರಕಟವಾಗಿರುವ ಈ ಪುಸ್ತಕವು, ಸಮಾಜ ಸುಧಾರಣೆ ಕಾರ್ಯಗಳಲ್ಲಿ ತೊಡಗಿಸಿಕೊಂಡಂತಹ ಸಂಘ ಸಂಸ್ಥೆಗಳಿಗೆ ಅತ್ಯಂತ ಉಪಯುಕ್ತ.



**ಪುಸ್ತಕದ ಬೆಲೆ: ರೂ. 50/–**

## ಮಾತಾಡ್, ಮಾತಾಡ್ ಗೊಂಬೆಯೇ

ಈ ಪುಸ್ತಕ ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆ, ಮಕ್ಕಳ ಹಕ್ಕು, ಶಿಕ್ಷಣ ಕುರಿತು ಜನರಲ್ಲಿ ಸಾಮಾಜಿಕ ಅರಿವನ್ನು ಮೂಡಿಸಲು ಗೊಂಬೆಯಾ–ಟದಂತಹ ಮಾಧ್ಯಮದ ಬಳಕೆ ಕುರಿತು ಒಂದು ಸ್ವಸಹಾಯ ಕೈಪಿಡಿ. ಈ ಕೈಪಿಡಿಯನ್ನು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಇಂದ ಹೊರತರಲಾಗಿದೆ. ಹಲವು ಗೊಂಬೆಯಾಟ ನಾಟಕಗಳನ್ನು ಒಳಗೊಂಡಂತಹ ಈ ಪುಸ್ತಕವನ್ನು ಓದು–ಬರಹ ಬಾರದಂತಹ ಪೋಷಕರಿಗೆ, ಮಕ್ಕಳಿಗೆ ಹಾಗೂ ಮಕ್ಕಳ ಅಭಿವೃದ್ಧಿಗಾಗಿ ದುಡಿತಯುತ್ತಿರುವ ಸಂಘ ಸಂಸ್ಥೆಗಳಿಗೆಂದೇ ವಿಶೇಷವಾಗಿ ರಚಿಸಲಾಗಿದೆ. ಈ ಪುಸ್ತಕವು ಗೊಂಬೆ ಆಟದ ಮೂಲಕ ಸಮಾಜದಲ್ಲಿ ಹೇಗೆ ಪರಿವರ್ತನೆ ತರಬಹುದು ಎಂಬುದನ್ನು ವಿವರಿಸುತ್ತದೆ.



**ಗೌರವ ಸಂಪಾದಕರು**
ಶ್ರೀ ಎಂ.ಎಸ್.ರವಿಶಂಕರ್
ಕಾರ್ಮಿಕ ಆಯುಕ್ತರು,
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

**ಮುಖ್ಯ ಸಂಪಾದಕರು**
ಶ್ರೀ ಬಸವರಾಜು .ಆರ್
ಉಪ ಸಂಯೋಜಕರು,
ಬಾಲ ಕಾರ್ಮಿಕ ಸಂಪನ್ಮೂಲ ಕೇಂದ್ರ,
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

**ಸಂಪಾದಕರು**
ಶ್ರೀ ಬಿ.ವಿ. ಕಿಶೋರ್ ಕುಮಾರ್
ಬಾಲ ಕಾರ್ಮಿಕ ಸಂಪನ್ಮೂಲ ಕೇಂದ್ರ,
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

**ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರ**

ನಮ್ಮ ಇ–ಜರ್ನಲ್‌ನ ಸದಸ್ಯತ್ವವನ್ನು ಶೀಘ್ರದಲ್ಲೆ ಆರಂಭವಾಗಲಿರುವ ನಮ್ಮ ವೆಬ್‌ಸೈಟ್‌ನ ಮೂಲಕ ಪಡೆಯಬಹುದು.

'ಕಾರ್ಮಿಕ ಭವನ', ಕಾರ್ಮಿಕ ಇಲಾಖೆ,
ಐಟಿಐ ಕಾಂಪೌಂಡ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು–29.
ದೂರವಾಣಿ: 080–22453549/
26531258 ಎಕ್ಸಟೆನ್ಷನ್: 152
ಇ–ಮೇಲ್: editorsrc@yahoo.com,
ksrccl@yahoo.in

**ಸಂಪಾದಕೀಯ ಸಲಹಾ ಸಮಿತಿ ಸದಸ್ಯರು**

**ಶ್ರೀ ಹೆಚ್.ಎಸ್. ಉತ್ತಪ್ಪ**
ಜಂಟಿ ಕಾರ್ಮಿಕ ಆಯುಕ್ತರು,
ಕಾರ್ಮಿಕ ಇಲಾಖೆ, ಬೆಂಗಳೂರು.

**ಶ್ರೀ ವಾಸುದೇವ ಶರ್ಮಾ**
ಚೈಲ್ಡ್ಸ್ ರೈಟ್ಸ್ ಟ್ರಸ್ಟ್, ಬೆಂಗಳೂರು.

**ಡಾ. ಅಶೋಕ್ ಕುಮಾರ್**
ಪ್ರೊ. & ಚೇರ್‌ಮನ್,
ಸುದ್ದಿ ಮಾಧ್ಯಮ, ಬೆಂಗಳೂರು "ವಿಶ್ವ"ದ್ಯಾಲಯ,
ಬೆಂಗಳೂರು.

**ಶ್ರೀಮತಿ ಬಾಗೇಶ್ರೀ**
ಪತ್ರಕರ್ತರು, ದಿ ಹಿಂದೂ,
ಬೆಂಗಳೂರು.

**ಶ್ರೀ ಕಾರ್ತಿಕ್ ಶೇಖರ್**
ಮುಖ್ಯ ಕಾರ್ಯದರ್ಶಿ,
ಯುನೈಟೆಡ್ಸ್ ಪ್ರೊ, ಬೆಂಗಳೂರು.

**ಡಾ. ಮಹೇಂದ್ರ .ಆರ್**
ಸಲ್ಯೂಷನ್ ಎಕ್ಸ್‌ಚೇಂಜ್ – ಕರ್ನಾಟಕ
ಸಮುದಾಯ, ಬೆಂಗಳೂರು.

**ಶ್ರೀಮತಿ ಪಂಕಜ .ಎನ್**
ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,
ಬೆಂಗಳೂರು.

**ಶ್ರೀಮತಿ ಬಾಲಸರಸ್ವತಿ,**
ಸಹ ನಿರ್ದೇಶಕರು,
ಸರ್ವ ಶಿಕ್ಷ ಅಭಿಯಾನ, ಬೆಂಗಳೂರು.

**ಶ್ರೀ ಪ್ರತಾಪ್ ಸಿಂಹ,**
ಪತ್ರಕರ್ತರು, ವಿಜಯ ಕರ್ನಾಟಕ,
ಬೆಂಗಳೂರು.

**ಶ್ರೀ ರಾಘವೇಂದ್ರ ಭಟ್**
ಸಂಯೋಜಕರು, ಯುನಿಸೆಫ್–ಮಕ್ಕಳ ರಕ್ಷಣಾ
ಯೋಜನೆ,
ರಾಯಚೂರು.